
# ಜಲ ಸಂಪದ

**ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲಸಂಪನ್ಮೂಲ ನಿರ್ವಹಣೆ ಹೂಡಿಕೆ ಯೋಜನೆ**








ಗೊಂದಿ ಆಧುನೀಕರಣ
ಯೋಜನೆ ವಾರ್ತಾಪತ್ರ

ಸಂಚಿಕೆ–10

ಖಾಸಗಿ ಪ್ರಸಾರಕ್ಕಾಗಿ

ಏಪ್ರಿಲ್–ಮೇ–ಜೂನ್ 2019



**ಈ ಸಂಚಿಕೆಯಲ್ಲಿ...**


- ಕೃಷಿ ಕ್ಷೇತ್ರೋತ್ಸವದಲ್ಲಿ ಹಬ್ಬದ ಸಂಭ್ರಮ
- ವಿಶಿಷ್ಟ ಪರಿಸರ ದಿನಾಚರಣೆ
- ಮಿತ ಖರ್ಚಿನ ಕೃಷಿಗೆ ವೇಸ್ಟ್ ಡಿಕಂಪೋಸರ್
- ದೇಸೀ ಭತ್ತ ಮತ್ತು ಸಿರಿಧಾನ್ಯ ಉತ್ತೇಜನ
- ಪರಿಸರ ಮತ್ತು ಸಾಮಾಜಿಕ ಸುರಕ್ಷೆ
- ಬದುಕು ಬೆಸೆಯುವ ಹೋಲಿಗೆ
- ತರಕಾರಿ ಬೀಜ ಸಂಗ್ರಹಣೆ ವಿಧಾನಗಳು
- ಭೌಗೋಳಿಕ ಮಾಹಿತಿ ಸಂಗ್ರಹ... ಇತ್ಯಾದಿ

# ಕೃಷಿ ಕ್ಷೇತ್ರೋತ್ಸವದಲ್ಲಿ ಹಬ್ಬದ ಸಂಭ್ರಮ

ಅದೊಂದು ಅಪರೂಪದ ಕಾರ್ಯಕ್ರಮ. ಅಲ್ಲಿ ರೈತರು ಮರೆತೇ ಹೋಗಿದ್ದ ಭತ್ತ ಮತ್ತು ರಾಗಿಯ ರಾಶಿ ಪೂಜೆಯನ್ನು ಮರುಸೃಷ್ಟಿಸಲಾಗಿತ್ತು. ಇಡೀ ತೋಟದಲ್ಲಿ ಎಲ್ಲಿ ನೋಡಿದರೂ ಸುಸ್ಥಿರ ಕೃಷಿ ಮಾಹಿತಿ ಫಲಕಗಳು. ವಿವಿಧ ಪದ್ಧತಿಗಳ ಪ್ರಾತ್ಯಕ್ಷಿಕೆಗಳು, ಎರೆಗೊಬ್ಬರ, ವೇಸ್ಟ್ ಡಿಕಂಪೋಸರ್ ಇತ್ಯಾದಿ ಮಾದರಿಗಳು. ತಮ್ಮ ಅನುಭವವನ್ನು ಹಂಚಿಕೊಂಡ ರೈತರು ಮತ್ತು ರೈತ ಮಹಿಳೆಯರು.

ಇದು 25–5–2019ರಂದು ಹಳೇ ಸೀಗೆಬಾಗಿ ಶಾಂತಪ್ಪನವರ ತೋಟದಲ್ಲಿ ನಡೆದ ಶ್ರೀ ಪದ್ಧತಿ ಭತ್ತ ಮತ್ತು ಸುಸ್ಥಿರ ಕೃಷಿ ಕ್ಷೇತ್ರೋತ್ಸವವನ್ನು ತೆಂಗಿನ ಸಸಿ ನೆಟ್ಟು ಭತ್ತದ ತೆಂಡೆ ಕಟಾವು ಮಾಡುವ ಮೂಲಕ ಉದ್ಘಾಟಿಸಿದ್ದು ವೈಶಿಷ್ಟ್ಯ. ಕಾರ್ಯಕ್ರಮವು ಭೂಮ್ತಾಯಿ ಗೀತೆಯೊಂದಿಗೆ ಆರಂಭವಾಯಿತು. ಸ್ಮೆಕ್ ತಂಡದ ಉಪನಾಯಕರಾದ ಡಾ. ಶ್ರೀನಿವಾಸ ಮುದ್ರಕರ್ತರವರು ಪ್ರಾಸ್ತವಿಕ ನುಡಿಗಳಲ್ಲಿ ಗೊಂದಿ ಆಧುನೀಕರಣ ಯೋಜನೆಯ ಉದ್ದೇಶಗಳಾದ ಕಾಲುವೆಗಳ ಆಧುನೀಕರಣ, ಕಾಲುವೆಗಳ ನಿರ್ವಹಣೆ ಮತು ಸುಸಿರ ಕ.ಷಿ ಉತೇಜನದ ಬಗೆ ತಿಳಿಸಿದರು.



ತೆಂಗಿನ ಸಸಿ ನೆಡುವ ಮೂಲಕ ಉದ್ಘಾಟನೆ

ತೋಟಗಾರಿಕೆ ಇಲಾಖೆ, ಭದ್ರಾವತಿಯ ಹಿರಿಯ ಸಹಾಯಕ ನಿರ್ದೇಶಕರಾದ ಜೆ.ಕಾಂತರಾಜ್‌ರವರು ತಾಲ್ಲೂಕಿನಲ್ಲಿ 15 ಸಾವಿರ ಹೆಕ್ಟೇರ್ ಇದ್ದ ಅಡಿಕೆ ಪ್ರದೇಶವು 25 ಸಾವಿರ ಹೆಕ್ಟೇರ್‌ನಷ್ಟು ಹೆಚ್ಚಳವಾಗಿದೆ, ರೈತರು ಅಡಿಕೆ ಒಂದಕ್ಕೆ ಮಹತ್ವ ನೀಡದೆ ಅಂತರ ಬೆಳೆಗಳಾಗಿ ಕೋಕೋ, ಕಾಳುಮೆಣಸು, ಜಾಯಿಕಾಯಿ, ಬಾಳೆ, ತೆಂಗು ಮತ್ತು ಇತರೆ ಬೆಳೆಗಳನ್ನು ಬೆಳೆಯುವುದರತ್ತ ಗಮನ ಹರಿಸುವುದರಿಂದ ಮುಂದೆ ಆಗುವಂತಹ ಅಪಾಯಗಳನ್ನು ತಡೆಗಟ್ಟಬಹುದೆಂದು ತಿಳಿಸಿದರು.

ಗೊಂದಿ ನೀರು ಬಳಕೆದಾರರ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಟಿ.ಎಸ್.ಮಂಜುನಾಥರವರು ಕಾಲುವೆಗಳ ಆಧುನೀಕರಣದಿಂದ ಉಂಟಾಗುತ್ತಿರುವ ಉಪಯೋಗಗಳ ಬಗ್ಗೆ ತಿಳಿಸಿದರು. ಭದ್ರಾಕಾಡಾ ಕಾರ್ಯಪಾಲಕ ಇಂಜಿನಿಯರ್ ಶಿವಾನಂದರವರು ಯೋಜನೆಯಡಿಯಲ್ಲಿ ಹೊಲಗಾಲುವೆಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು ಅವುಗಳನ್ನು ರೈತರುಗಳು ಸುಸ್ಥಿರವಾಗಿ ಕಾಪಾಡಿಕೊಂಡು ಹೋಗಬೇಕೆಂದು ತಿಳಿಸಿದರು.



ಕ್ಷೇತ್ರೋತ್ಸವದಲ್ಲಿ ನೆರೆದ ಜನಸ್ತೋಮ

ಆಕಾಶವಾಣಿ ಭದ್ರಾವತಿಯಿಂದ ಆಗಮಿಸಿದ ಸುಬ್ರಮಣ್ಯ ಇದು ಒಂದು ಕುಟುಂಬದ ಹಬ್ಬದಂತೆ ಸಂಭ್ರಮದಿಂದ ನಡೆಯುತ್ತಿದೆ. ಇದೊಂದು ವಿಶಿಷ್ಟ ಅನುಭವ, ರೈತರಿಗೆ ನೀರಿನ ನಿರ್ವಹಣೆ ಕುರಿತು ಮಾಹಿತಿಗಳನ್ನು ನೀಡುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು. ದೇಸೀ ಭತ್ತ ಸಂರಕ್ಷಕರಾದ ಮಲವಗೊಪ್ಪದ ರೈತ ಜಗದೀಶ್ ನಾಯಕ್ ತಮ್ಮ ಅನುಭವ ಹಂಚಿಕೊಂಡರು.

ಶಾಂತಪ್ಪ, ಟಿ.ಕೆ.ಗಂಗಪ್ಪನವರು 'ಶ್ರೀ' ಪದ್ಧತಿ ಭತ್ತದ ತಮ್ಮ ಅನುಭವ, ತಾವು ಅನುಸರಿಸಿದ ಕೆಲವು ಸಾಧನಗಳ ಬಗ್ಗೆ ತಿಳಿಸಿದರು. ಮೂಡಲವಿಠಲಾಪುರ ಸಂಘದ ಮಹಿಳಾ ಉಪಸಮಿತಿಯ ಸದಸ್ಯರಾದ ಶ್ರೀಮತಿ ಉಷಾ ಯೋಜನೆಯಲ್ಲಿ ಮಹಿಳೆಯರಿಗೆ ಸ್ವ–ಉದ್ಯೋಗಗಳ ಬಗ್ಗೆ ಮಾಹಿತಿ ಮತ್ತು ತರಬೇತಿಗಳನ್ನು ನೀಡ ಲಾಗುತ್ತಿದ್ದು ಎಲ್ಲಾ ಮಹಿಳಾ ಉಪಸಮಿತಿಯವರು ಸಕ್ರಿಯವಾಗಿ ಪಾಲ್ಗೊಂಡು ಇದರ ಲಾಭವನ್ನು ಪಡೆಯಬೇಕೆಂದು ತಿಳಿಸಿದರು. ಸೀಗೆಬಾಗಿ ನೀರು ಬಳಕೆದಾರರ ಸಂಘದ ಉಪಾಧ್ಯಕ್ಷರಾದ ಪುಟ್ಟಮ್ಮ ಅಧ್ಯಕ್ಷತೆ ವಹಿಸಿದ್ದರು. ಬೀಜಾಮೃತ, ಜೀವಾಮೃತ, ಬೀಜದ ಆಯ್ಕೆ, ಪಂಚಗವ್ಯ, ಸಿರಿಧಾನ್ಯ, ವೇಸ್ಟ್‌ಡಿಕಂಪೋಸರ್, ವೀರಾಪುರದ ಕೃಷಿಕರಾದ ಮಾದೇಗೌಡ, ಅಗಸನಹಳ್ಳಿಯ ಮೀನಾಕ್ಷಮ್ಮ ಸುಸ್ಥಿರ ಕೃಷಿ ಪದ್ಧತಿಗಳ ಪ್ರಾತ್ಯಕ್ಷಿಕೆ ನೀಡಿದರು. 84 ಪುರುಷರು ಹಾಗೂ 96 ಹೆಣ್ಣುಮಕ್ಕಳೂ ಸೇರಿದಂತೆ 193 ಜನ ಭಾಗವಹಿಸಿದ್ದರು.

ಮಂಜುಳ, ಸ್ಮೆಕ್ ಯೋಜನಾ ಸಹಾಯ ಸಂಸ್ಥೆ



ರಾಶಿ ಪೂಜೆ

## ಬೆಳಕಿನ ಹಾದಿ

# ಯೋಜನೆಯ ಮುಂದುವರಿಕೆ



ಶ್ರೀ ಜಿ.ಇ. ಯತೀಶ್‌ಚಂದ್ರನ್
ಮುಖ್ಯ ಇಂಜಿನಿಯರ್
ತುಂಗಾ ಮೇಲ್ದಂಡೆ ಯೋಜನೆ
ಶಿವಮೊಗ್ಗ

ಗೊಂದಿ ಯೋಜನೆಯ ಮುಖ್ಯ ಕಾಲುವೆಗಳು ಮತ್ತು ಸಂಘಗಳು ಕೈಗೊಂಡಿದ್ದ ಕಾಮಗಾರಿಗಳು ಹಲವು ಕಾರಣಗಳಿಂದ ನಿಗದಿತ ಅವಧಿಗೆ ಮುಕ್ತಾಯವಾಗಿರಲಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಡಿಸೆಂಬರ್ 2019ರವರೆಗೆ ಯೋಜನೆ ಮುಂದುವರಿಯಲು ಅವಕಾಶ ಕಲ್ಪಿಸಿದೆ. ಇದೇ ಸಮಯಕ್ಕೆ ಯೋಜನಾ ಸಹಾಯ ಸಂಸ್ಥೆಗೂ ತನ್ನ ಸೇವೆಗಳನ್ನು ಮುಂದುವರಿಸಲು ಅವಕಾಶ ನೀಡಲಾಗಿದೆ. ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಜೂನ್-ಜುಲೈ ತಿಂಗಳಲ್ಲಿ ಬಾಕಿ ಉಳಿದಿದ್ದ ಮುಖ್ಯ ಕಾಲುವೆ, ಹೊಲಗಾಲುವೆ, ಕಿರು ಸೇತುವೆಗಳು, ಸಂಘಗಳ ಕಟ್ಟಡ ನಿರ್ಮಾಣ, ಸುಸ್ಥಿರ ಕೃಷಿ, ಜೀವನೋಪಾಯ, ಮಹಿಳಾ ಒಳಗೊಳ್ಳುವಿಕೆ ಚಟುವಟಿಕೆ ಇತ್ಯಾದಿಗಳು ವೇಗವಾಗಿ ನಡೆಯುವಂತೆ ಕ್ರಮ ವಹಿಸಲಾಗಿದೆ.





ಮುಖ್ಯ ಕಾಲುವೆ ಡ್ರೈನೇಜ್ 26 ಕಿ.ಮೀ. ಕಾಮಗಾರಿ ಪ್ರಗತಿಯಲ್ಲಿ

ಈ ಸಂಚಿಕೆಯಲ್ಲಿ ಗೊಂದಿ ಯೋಜನಾ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕೃಷಿ ಮತ್ತು ಜೀವನೋಪಾಯ ಚಟುವಟಿಕೆಗಳ ವೈವಿಧ್ಯಮಯ ವಿವರಗಳಿವೆ. ಭತ್ತ, ತರಕಾರಿ ಮತ್ತು ಸಿರಿಧಾನ್ಯಗಳಿಗೆ ಉತ್ತೇಜನ ನೀಡುವ ಮೂಲಕ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ದೃಷ್ಟಿಯಿಂದ ಸಾವಯವ ಕೃಷಿಕರ ಸಂಘ ರಚನೆಗೆ ಚಾಲನೆ ನೀಡಿರುವುದು, ಶ್ರೀ ಪದ್ಧತಿ ಮತ್ತು ಸುಸ್ಥಿರ ಕೃಷಿ ಕ್ಷೇತ್ರೋತ್ಸವ, ವೇಸ್ಟ್ ಡಿಕಂಪೋಸರ್ ವಿತರಣೆ, ವಿವಿಧ ಗ್ರಾಮಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿರುವ ಟೈಲರಿಂಗ್ ತರಬೇತಿಗಳು, ಅಣಬೆ ಕೃಷಿಗೆ ಪ್ರೋತ್ಸಾಹ ಮುಂತಾದ ಚಟುವಟಿಕೆಗಳ ಬಗ್ಗೆ ವರದಿ ಹಾಗೂ ವಿಶ್ಲೇಷಣಾತ್ಮಕ ಲೇಖನಗಳಿವೆ.

ಜೂನ್ 5ರಂದು ವಿಶ್ವ ಪರಿಸರ ದಿನ. ಗೊಂದಿ ವ್ಯಾಪ್ತಿಯಲ್ಲಿ ಪ್ರತಿ ವರ್ಷ ಇದನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ. ಈ ವರ್ಷ ಕೊಪ್ಪದೊಡ್ಡಕೆರೆ ಮತ್ತು ಬಾರಂದೂರು ಸಂಘಗಳು ಸ್ವಯಂಪ್ರೇರಣೆಯಿಂದ ಸಸಿ ನೆಡುವುದು ಹಾಗೂ ಕಾಲುವೆ ಸ್ವಚ್ಛಗೊಳಿಸುವ ಮೂಲಕ ಇದನ್ನು ಆಚರಿಸಿದ್ದಾರೆ. ಆ ಬಗ್ಗೆ ವಿವರಗಳಿವೆ. ಜೊತೆಗೆ ಮೂಡಲವಿಠಲಾಪುರ ಶಾಲೆಯಲ್ಲಿ ಕಳೆದ ವರ್ಷದ ಪರಿಸರ ದಿನದಂದು ನೆಟ್ಟ ಸಸಿಗಳು ಸಮೃದ್ಧವಾಗಿ ಬೆಳೆದಿದ್ದು ಎರಡೂ ವರ್ಷದ ಫೋಟೋ ನೀಡುವ ಮೂಲಕ ಹೋಲಿಕೆ ಮಾಡಲಾಗಿದೆ. ಎಲ್ಲ ಕಡೆಯೂ ಹೀಗೇ ಇರಲಿ ಎಂಬುದು ಒಟ್ಟಾರೆ ಆಶಯ.

## ಶ್ರದ್ಧಾಂಜಲಿ



ಗೊಂದಿ ಯೋಜನಾ ಮಟ್ಟದ ನೀರು ಬಳಕೆದಾರರ ಸಹಕಾರ ಸಂಘಗಳ ಒಕ್ಕೂಟದ ಪ್ರಥಮ ಅಧ್ಯಕ್ಷರಾದ ಶ್ರೀ ಟಿ.ಎಸ್.ಮಂಜುನಾಥ್ (62 ವರ್ಷ) ಅವರು ದಿನಾಂಕ 13-7-2019ರಂದು ನಿಧನರಾಗಿದ್ದಾರೆ. ತಳ್ಳಿಕಟ್ಟೆ ನೀರು ಬಳಕೆದಾರ ಸಂಘದ ಅಧ್ಯಕ್ಷರಾಗಿಯೂ ಅವರು ಸೇವೆ ಸಲ್ಲಿಸುತ್ತಿದ್ದರು. ಸಹಕಾರ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿದ್ದ ಶ್ರೀಯುತರು ಗೊಂದಿ ಒಕ್ಕೂಟದ ಏಳಿಗೆಗಾಗಿ ಹಲವು ಯೋಜನೆಗಳನ್ನು ಹಾಕಿಕೊಂಡಿದ್ದರು. ಅಗತ್ಯವಾದಾಗಲೆಲ್ಲಾ ಸಂಘಗಳ ಅಭಿವೃದ್ಧಿಗೆ ಸೂಕ್ತ ಸಲಹೆ ನೀಡುತ್ತಾ ಹಿರಿಯಣ್ಣನಾಗಿದ್ದರು. ಅವರ ನಿಧನಕ್ಕೆ ಗೊಂದಿ ಆಧುನೀಕರಣ ಯೋಜನೆ ಮತ್ತು ಸ್ಮೆಕ್ ಸಂಸ್ಥೆ ಹಾಗೂ ಜಲಸಂಪದ ವತಿಯಿಂದ ಅತೀವ ಸಂತಾಪಗಳು.

## ಕೊಪ್ಪದೊಡ್ಡಕೆರೆ ಸಂಘದಿಂದ ವಿಶಿಷ್ಟ ಪರಿಸರ ದಿನಾಚರಣೆ







ಕೊಪ್ಪ ದೊಡ್ಡಕೆರೆ ನೀರು ಬಳಕೆದಾರರ ಸಹಕಾರ ಸಂಘವು 5–6–2019ರಂದು ಮಹಿಳಾ ಸ್ವಸಹಾಯ ಸಂಘಗಳು, ಜನ ಶಿಕ್ಷಣ ಸಂಸ್ಥೆಯ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚಾರಣೆ ಹಮ್ಮಿಕೊಂಡಿತು. ಬೆಳಗ್ಗೆ 10 ಗಂಟೆಗೆ ಕೆರೆ ಕೋಡಿಯ ಬಳಿ ಸೇರ್ಪಡೆಯಾದ 100ಕ್ಕೂ ಅಧಿಕ ಜನರನ್ನು 11 ಗುಂಪುಗಳನ್ನು ಮಾಡಿ, ಪ್ರತಿ ಗುಂಪಿನವರು ನೆರಳೆ, ಬೇವು, ಹೊಂಗೆ ಸಸಿಗಳನ್ನ ನೆಡಲು ಸ್ವತಃ ಗುಂಡಿ ತೆಗೆದು, ಸಸಿ ನೆಟ್ಟು ನೀರನ್ನು ಹಾಕಿ, ಸಸಿಯ ರಕ್ಷಣೆಗಾಗಿ ಸುತ್ತಲು ಮುಳ್ಳಿನ ಬೇಲಿ ಹಾಕಿದರು. ಗಿಡ ನೆಡುವ ಮುಂಚೆ ಪರಿಸರ ಗೀತೆಗಳನ್ನು ಹಾಡಲಾಯಿತು.

ನಂತರ ಹೊಲಗಾಲುವೆ ಸಂಖ್ಯೆ 2ರಲ್ಲಿ 250 ಮೀಟರ್ ಮತ್ತು ಸಂಖ್ಯೆ 11ರಲ್ಲಿ 550 ಮೀ.ನಲ್ಲಿ ಶ್ರಮದಾನ ಮಾಡುವ ಮೂಲಕ ಸ್ವಚ್ಛತೆಯನ್ನು ಮಾಡಲಾಯಿತು. ಮಹಿಳೆಯರು, ಪುರುಷರು ಒಟ್ಟಾಗಿ ಶ್ರಮದಾನದಲ್ಲಿ ಪಾಲ್ಗೊಂಡು 800 ಮೀ. ಹೊಲಗಾಲುವೆಗಳ ಸ್ವಚ್ಛತಾ ಕಾರ್ಯಕ್ರಮ ನೆರವೇರಿಸಿದರು.

ಇದರಲ್ಲಿ 8 ಗ್ರಾಮಗಳ ಆಸಕ್ತರು, ಹೊಳೆಹೊನ್ನೂರಿನ ಭಾಗ್ಯಲಕ್ಷ್ಮೀ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಆದಿಶಕ್ತಿ ಮಹಿಳಾ ಮಂಡಳಿ, ನಿವೇದಿತಾ ಸ್ತ್ರೀಶಕ್ತಿ ಸಂಘ, ಹೇಮಾವತಿ ಜ್ಞಾನ ವಿಕಾಸ ಕೇಂದ್ರದ ಸದಸ್ಯರು ಪಾಲ್ಗೊಂಡಿದ್ದರು. ಶಿವಮೊಗ್ಗದ ಜನಶಿಕ್ಷಣ ಸಂಸ್ಥೆ ಸಹಯೋಗ ನೀಡಿತ್ತು.

ಮಾಹಿತಿ ಕ್ರೋಢೀಕರಣ : ನಿರ್ಮಲ, ಸ್ಮೆಕ್ ಸಂಸ್ಥೆ

## ಎದೆಯುದ್ದ ಬೆಳೆದ ಕಳೆದ ವರ್ಷ ನೆಟ್ಟ ಸಸಿಗಳು

ಮೂಡಲವಿಠಲಾಪುರದ ಶಾಲಾ ಆವರಣದಲ್ಲಿ ಕಳೆದ ವರ್ಷ (2018)ದ ಪರಿಸರ ದಿನದಂದು ನೆಟ್ಟ 10ಕ್ಕೂ ಅಧಿಕ ನೇರಳೆ, ಹಲಸು ಇತ್ಯಾದಿ ಸಸಿಗಳು ಈಗ ಚೆನ್ನಾಗಿ ಬೆಳೆದಿವೆ. ಮಕ್ಕಳು ಹಾಗೂ ಶಾಲಾ ಶಿಕ್ಷಕರ ಆಸಕ್ತಿಯಿಂದ ಇವುಗಳಿಗೆ ನೀರು ಹಾಕಿ ರಕ್ಷಿಸಿದ್ದಾರೆ.

ಕಳೆದ ವರ್ಷ ಮತ್ತು ಈ ವರ್ಷದ ಫೋಟೋಗಳನ್ನು ಹೋಲಿಕೆಗಾಗಿ ಇಲ್ಲಿ ನೀಡಲಾಗಿದೆ.












### ಬೀಜಾಮೃತ ತಯಾರಿಕೆ

- 50 ಲೀ. ಡ್ರಮ್ ಅಥವಾ ಮಣ್ಣಿನ ಮಡಿಕೆ ತೆಗೆದುಕೊಳ್ಳಿ.
- ಅದಕ್ಕೆ 50 ಲೀ. ನೀರು ಹಾಕಿ, 5 ಕೆ.ಜಿ. ಸಗಣಿಯನ್ನು ಬಟ್ಟೆಯಲ್ಲಿ ಕಟ್ಟಿ ಒಂದು ರಾತ್ರಿ ನೆನೆ ಹಾಕಿ.
- 1 ಲೀ. ನೀರಿನಲ್ಲಿ 100 ಗ್ರಾಂ ಸುಣ್ಣವನ್ನು ಇದೇ ರೀತಿ ನೆನೆ ಹಾಕಿ.

ಮರುದಿನ 5 ಲೀ. ಗಂಜಲ ಹಾಗೂ ನೆನೆ ಹಾಕಿದ ಸುಣ್ಣವನ್ನು ಸಗಣಿ ನೀರಿನಲ್ಲಿ ಚೆನ್ನಾಗಿ ಮಿಶ್ರಣ ಮಾಡಿ. ತಯಾರಾದ ದ್ರಾವಣವನ್ನು ಭತ್ತ, ರಾಗಿ, ಕಾಳುಗಳು, ಸಸಿಗಳು, ಬಾಳೆಕಂಡು ಇತ್ಯಾದಿಗಳ ಉಪಚಾರಕ್ಕೆ ಬಳಸಿ.

### ಪಂಚಗವ್ಯ

ಹಸುವಿನ ಸಗಣಿ, ಗಂಜಲ, ಹಾಲು, ಮೊಸರು ಮತ್ತು ತುಪ್ಪದಿಂದ ತಯಾರಿಸಿದ ದ್ರಾವಣವೇ ಪಂಚಗವ್ಯ.

ತಯಾರಿಕೆ ವಿಧಾನ : 10 ಲೀ. ಗಂಜಲ, 7 ಕೆ.ಜಿ. ಸಗಣಿ, 3 ಲೀ. ಹಾಲು, 2 ಲೀ. ಮೊಸರು ಮತ್ತು 1 ಕೆ.ಜಿ. ತುಪ್ಪವನ್ನು ಮಿಶ್ರ ಮಾಡಿ ಒಂದು ಪಾತ್ರೆಗೆ ಹಾಕಿ 20–22 ದಿನ ಬಿಡಬೇಕು. ನಂತರ ಸೋಸಿಕೊಂಡು ದ್ರಾವಣ ಸಂಗ್ರಹಿಸಿ. 100 ಲೀ. ನೀರಿಗೆ 3 ರಿಂದ 5 ಲೀ. ಪಂಚಗವ್ಯ ಮಿಶ್ರ ಮಾಡಿ ಬಳಸಬಹುದು.

ಉಪಯೋಗ : ಎಲ್ಲಾ ರೀತಿಯ ಬೆಳೆಗಳಿಗೆ ಉಪಯುಕ್ತ. ಪೋಷಕಾಂಶ ಕೊರತೆ ನೀಗಿಸುತ್ತದೆ, ಕೀಟ–ರೋಗ ಬಾಧೆ ನಿರೋಧಕ ಶಕ್ತಿ ನೀಡುತ್ತದೆ. ಇಳುವರಿ ವೃದ್ಧಿಸುತ್ತದೆ, ದ್ಯುತಿ ಸಂಶ್ಲೇಷಣೆ ಕ್ರಿಯೆ ವೇಗವಾಗುತ್ತದೆ. ತರಕಾರಿ ಮತ್ತು ಹಣ್ಣುಗಳ ರುಚಿ ಹೆಚ್ಚಾಗುತ್ತದೆ ಹಾಗೂ ದೀರ್ಘಕಾಲದವರೆಗೆ ತಾಜಾತನ ಉಳಿಯುತ್ತದೆ.


ಪಂಚಗವ್ಯ ತಯಾರಿಕೆ, ಸರೋಜಮ್ಮ, ದೊಡ್ಡಗೊಪ್ಪೇನಹಳ್ಳಿ

### ಉಪ್ಪು ನೀರಿನ ದ್ರಾವಣದಿಂದ ಬೀಜದ ಆಯ್ಕೆ (Seed selection by using salt water)

ಬಳಸುವ ಬೀಜದ ಪ್ರಮಾಣಕ್ಕನುಗುಣವಾಗಿ ಒಂದು ಬಕೆಟ್ ಅಥವಾ ಪಾತ್ರೆಯಲ್ಲಿ ನೀರು ತೆಗೆದುಕೊಂಡು ಒಂದು ಆರೋಗ್ಯವಂತ ಮೊಟ್ಟೆಯನ್ನು ಅದರಲ್ಲಿ ಬಿಡಿ. ಕಲ್ಲು ಉಪ್ಪು ಸೇರಿಸಿ ಮಿಶ್ರಣ ಮಾಡಿ. ಒಂದು ಲೀ. ನೀರಿಗೆ 200 ಗ್ರಾಂ ಉಪ್ಪು ಬೇಕಾಗುತ್ತದೆ. ಮೊಟ್ಟೆ ನಾಲ್ಕಾಣೆ ಅಗಲದಷ್ಟು ನೀರಿನ ಮೇಲೆ ತೇಲುವವರೆಗೂ ಉಪ್ಪನ್ನು ಮಿಶ್ರಣ ಮಾಡಿ. ಮೊಟ್ಟೆ ಮೇಲೆ ತೇಲಿದರೆ ಆಗ ಬೀಜದ ಆಯ್ಕೆಗೆ ದ್ರಾವಣ ತಯಾರಿದೆ ಎಂದರ್ಥ. ಇದಕ್ಕೆ ಭತ್ತ ಹಾಕಿ 15 ನಿಮಿಷ ಬಿಟ್ಟು ನಂತರ ಸ್ವಚ್ಛ ನೀರಿನಲ್ಲಿ ತೊಳೆದು ಬಳಸಬಹುದು.

### ಮುಚ್ಚಿಗೆಮಾಡುವುದು (Mulching)

ಮಣ್ಣು ಮತ್ತು ನೀರಿನ ಸಂರಕ್ಷಣೆಯಲ್ಲಿ ಹೊಲಗಳಲ್ಲಿ ನಿರ್ಮಿಸುವ ಬದುಗಳು, ತಡೆಗಳು ಎಷ್ಟು ಮುಖ್ಯವೋ ಹೊದಿಕೆ ಮಾಡುವುದೂ ಅಷ್ಟೇ ಮುಖ್ಯ. ಇದರಿಂದ ಉತ್ಪಾದಕತೆಯಲ್ಲಿ ಹೆಚ್ಚಳ ಕಾಣಬಹುದು. ಹಣ್ಣಿನ ಗಿಡಗಳು, ತೋಟಗಾರಿಕ ಗಿಡಗಳು, ಬಹುವಾರ್ಷಿಕ ಗಿಡಗಳಿಗೆ ಕೃಷಿ ತ್ಯಾಜ್ಯಗಳನ್ನು ಮತ್ತು ಪರಿಕರಗಳನ್ನು ಎಲ್ಲೆಂದರಲ್ಲಿ ಬಿಸಾಡದೇ ಹೊಲಗಳಲ್ಲಿ ಹಾಗೂ ಮರಗಿಡಗಳ ಬುಡಕ್ಕೆ ಹಾಕುವುದರಿಂದ ನೀರು ಆವಿಯಾಗದಂತೆ ತಡೆಯಬಹುದು.


ಅಡಿಕೆ ತೋಟದಲ್ಲಿ ದ್ವಿದಳ ಧಾನ್ಯ ಬೆಳೆಯ ಮುಚ್ಚಿಗೆ

### ಉಪಯೋಗಗಳು :

- ನೀರು ಆವಿಯಾಗುವುದನ್ನು ತಡೆಗಟ್ಟಬಹುದು. ಮಣ್ಣಿನ ಫಲವತ್ತತೆ ಹೆಚ್ಚಿಸಬಹುದು. ಕಳೆಗಳನ್ನು ನಿಯಂತ್ರಿಸಬಹುದು.
- ಮರಗಿಡಗಳ ಬುಡಕ್ಕೆ ಬೇಸಿಗೆಯಲ್ಲಿ ಹೊದಿಕೆ ಇರುವುದರಿಂದ ಹೆಚ್ಚು ನೀರಿನ ಅಗತ್ಯವಿರುವುದಿಲ್ಲ.
- ಹೊದಿಕೆ ರೂಪದಲ್ಲಿ ಕೃಷಿತ್ಯಾಜ್ಯಗಳನ್ನು ಹಾಕುವುದರಿಂದ ಮಳೆಗಾಲದಲ್ಲಿ ಕರಗಿ ಗೊಬ್ಬರವಾಗುತ್ತವೆ.
- ಹೊಲಗಳಲ್ಲಿ ಕೃಷಿ ತ್ಯಾಜ್ಯಗಳಿಗೆ ಬೆಂಕಿ ಹಾಕುವುದು, ಎಲ್ಲಂದರಲ್ಲಿ ಬಿಸಾಡುವುದು ತಪ್ಪುತ್ತದೆ.

ಮುಖ್ಯ ಬೆಳೆಯ ಸಾಲುಗಳ ಮಧ್ಯದಲ್ಲಿ ಅಂತರ ಬೆಳೆ ಅಥವಾ ಹಸಿರೆಲೆ ಸಸ್ಯಗಳಾದ ಹುರುಳಿ, ಅಲಸಂದೆ, ಅವರೆ, ಹೆಸರು, ಉದ್ದು, ವೆಲ್ವೆಟ್ ಬೀನ್ಸ್ ಮುಂತಾದವು ಬೆಳೆಯುವುದೂ ಸಹ ಒಂದು ರೀತಿಯ ಹೊದಿಕೆಯೇ.

ಮಾಹಿತಿ : ವಿವಿಧ ಮೂಲಗಳಿಂದ

# ಮಿತ ಖರ್ಚಿನ ಕೃಷಿಗೆ ವೇಸ್ಟ್ ಡಿಕಂಪೋಸರ್

ಇದೊಂದು ಸೂಕ್ಷ್ಮಾಣುಜೀವಿ ದ್ರಾವಣ. ಹಸುಗಳ ಸಗಣಿಯ ಲೋಳೆಯಲ್ಲಿರುವ (ಮ್ಯೂಕಸ್) ಸೂಕ್ಷ್ಮಾಣುಗಳನ್ನು ಬೇರ್ಪಡಿಸಿ ವೇಸ್ಟ್ ಡಿಕಂಪೋಸರ್ ತಯಾರಿಸಲಾಗುತ್ತದೆ. ಇಳುವರಿ ಹೆಚ್ಚಿಸಲು, ಕೀಟ/ರೋಗ ನಿಯಂತ್ರಿಸಲು, ತಿಪ್ಪೆಗೊಬ್ಬರವನ್ನು ಬೇಗ ಕಳಿಯುವಂತೆ ಮಾಡಲು, ಬೀಜೋಪಚಾರಕ್ಕೆ, ಹೊಲದಲ್ಲಿ ಬಿದ್ದ ತ್ಯಾಜ್ಯವನ್ನು ಬೇಗ ಕಳಿಯುವಂತೆ ಮಾಡಲು ಈ ದ್ರಾವಣ ಉಪಯುಕ್ತ. ಸಾವಯವ ವಸ್ತುಗಳು ಕಳಿತು ಗೊಬ್ಬರವಾಗಲು 100–120 ದಿವಸಗಳು ಬೇಕು. ಆದರೆ ವೇಸ್ಟ್‌ಡಿಕಂಪೋಸರ್ ಬಳಸಿದರೆ ಕೇವಲ 40–50 ದಿನಗಳಲ್ಲಿ ಗೊಬ್ಬರ ತಯಾರಿಸಬಹುದು.

### ದ್ರಾವಣ ಮಾಡುವ ವಿಧಾನ

- 2 ಕೆ.ಜಿ. ಬೆಲ್ಲವನ್ನು 200 ಲೀ. ನೀರು ಹಿಡಿಯುವ ಡ್ರಂನಲ್ಲಿ ಚೆನ್ನಾಗಿ ಕರಗಿಸಿ.
- ಒಂದು ಬಾಟಲಿನಲ್ಲಿರುವ ವೇಸ್ಟ್ ಡಿಕಂಪೋಸರ್ ಅನ್ನು ನೀರಿಗೆ ಮಿಶ್ರ ಮಾಡಿ (ಕೈಯಿಂದ ಮುಟ್ಟಬಾರದು).
- ಮಿಶ್ರಣವನ್ನು ಕೋಲಿನಿಂದ ತಿರುಗಿಸಿ ಡ್ರಂ ಅನ್ನು ಮುಚ್ಚಿರಿ. ಪ್ರತಿದಿನ ಒಂದು ಸಲ ತಿರುಗಿಸಬೇಕು.
- 4 ರಿಂದ 7 ದಿನಗಳ ಒಳಗೆ ವೇಸ್ಟ್ ಡಿಕಂಪೋಸರ್ ಬಳಕೆಗೆ ತಯಾರಾಗುತ್ತದೆ.
- 10 ಲೀ. ದ್ರಾವಣದಿಂದ ಪುನಃ 200 ಲೀ. ತಯಾರಿಸಿಕೊಳ್ಳಬಹುದು.







ಗೊಂದಿ ಯೋಜನಾ ವ್ಯಾಪ್ತಿಯಲ್ಲಿ ಸುಸ್ಥಿರ ಕೃಷಿ ವಿಸ್ತರಣೆ ಮಾಡುವ ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದ್ದು, ಅದರಲ್ಲಿ ವೇಸ್ಟ್ ಡಿಕಂಪೋಸರ್ ಅನ್ನು ಬಳಸುವಂತೆ ರೈತರಿಗೆ ಮಾಹಿತಿ ಹಾಗೂ ಪ್ರೋತ್ಸಾಹ ನೀಡಲಾಗುತ್ತಿದೆ. ಇದಕ್ಕಾಗಿ 1000 ಕರಪತ್ರಗಳನ್ನು ಮುದ್ರಿಸಿ ವಿತರಿಸಲಾಗಿದೆ. ಜೊತೆಗೆ ಇದರ ತಯಾರಿಕೆ ಬಗ್ಗೆ ನಾಲ್ಕು ನಿಮಿಷಗಳ ಒಂದು ವೀಡಿಯೋ ತಯಾರಿಸಿ ಗೊಂದಿ ವಾಟ್ಸಾಪ್ ಗುಂಪಿನಲ್ಲಿ ಹಂಚಲಾಗಿದೆ. ಅಲ್ಲದೆ 10 ಜನ ಆಸಕ್ತರಿಗೆ ವೇಸ್ಟ್ ಡಿಕಂಪೋಸರ್ ಬಾಟಲಿಗಳನ್ನು ವಿತರಿಸಿದ್ದು ಎಲ್ಲರಿಗೂ ಅದರ ತಯಾರಿಕೆ ಮತ್ತು ಬಳಕೆ ಬಗ್ಗೆ ಸ್ವತಃ ಮಾರ್ಗದರ್ಶನ ಮಾಡಲಾಗಿದೆ. ಈ ರೈತರಿಗೆ ಮಾಹಿತಿ ತಿಳಿಸುವಾಗ ಅಕ್ಕ–ಪಕ್ಕದ ರೈತರೂ ಸಹ ಭಾಗವಹಿಸಿ ಮಾಹಿತಿ ಪಡೆದಿರುತ್ತಾರೆ. ಈವರೆಗೆ ಒಟ್ಟಾರೆ 1200 ಲೀ. ಡಿಕಂಪೋಸರ್ ದ್ರಾವಣವನ್ನು ತಯಾರಿಸಿದ್ದಾರೆ. ಕಾಗೆಕೊಡಮಗ್ಗೆ ರವಿಕುಮಾರ್ ಅವರು 2 ಬಾರಿ ಇದನ್ನು ತಯಾರಿಸಿಕೊಂಡಿದ್ದು, ಅಂಗಾಂಶ ಬಾಳೆ, ಅಡಿಕೆ ಹಾಗೂ ತ್ಯಾಜ್ಯ ಕೊಳೆಯಿಸಲು ಬಳಸಿರುತ್ತಾರೆ.

ಈ ದ್ರಾವಣ ಬಳಕೆಯ ಪ್ರತಿ ದಿನದ ಮಾಹಿತಿ ಪಡೆಯಲು ಸ್ನೆಕ್, ಶಿವಮೊಗ್ಗ ಕಛೇರಿಯ ಎಂ.ಐ.ಎಸ್. ವಿಭಾಗದಿಂದ ಗೂಗಲ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಲಾಗಿದೆ.

### ಬಳಕೆಯ ಅನುಭವ

ಕಾಗೆಕೋಡಮಗ್ಗೆಯ ರವಿಕುಮಾರ್ ಅವರು ಎರಡು ಬಾರಿ ಡಿಕಂಪೋಸರ್ ತಯಾರಿಸಿ ಬಳಸುತ್ತಿದ್ದಾರೆ. ಅಂಗಾಂಶ ಬಾಳೆ ಹಾಗೂ ಸೌತೆ ಬಳ್ಳಿಗೆ ಸಿಂಪಡಿಸಿದ್ದಾರೆ. ಅಡಿಕೆ ತ್ಯಾಜ್ಯದ ಮೇಲೆ ಸಿಂಪಡಿಸಿದ್ದು ಫಲಿತಾಂಶ ಉತ್ತಮವಾಗಿದೆ ಎನ್ನುತ್ತಾರೆ.




ಮಾಹಿತಿ ಕ್ರೋಢೀಕರಣ : ಮೇಘನ ಎಸ್.ಡಿ., ಸ್ನೆಕ್ ಸಂಸ್ಥೆ


# ದೇಸೀ ಭತ್ತ ಮತ್ತು ಸಿರಿಧಾನ್ಯ ಉತ್ತೇಜನ


ಮೈಸೂರು ಬೀಜ ಮೇಳದಲ್ಲಿ ಗೊಂದಿ ರೈತರು

ಯೋಜನೆಯಲ್ಲಿ ಈ ವರ್ಷ ಸುಸ್ಥಿರ ಕೃಷಿ ಉತ್ತೇಜನಕ್ಕೆ ಹಲವು ಕ್ರಮ ಕೈಗೊಳ್ಳಲಾಗುತ್ತಿದೆ. ಅದರಲ್ಲಿ ದೇಸೀ ಭತ್ತ, ತರಕಾರಿ ಮತ್ತು ಸಿರಿಧಾನ್ಯ ಉತ್ತೇಜನವೂ ಒಂದು. ಮೈಸೂರಿನ ಸಹಜ ಸಮೃದ್ಧ ಸಂಸ್ಥೆ ಇದಕ್ಕೆ ಮಾರ್ಗದರ್ಶನ ಮತ್ತು ಮಾರುಕಟ್ಟೆ ಸಹಕಾರ ನೀಡಲಿದೆ. ಇದಕ್ಕಾಗಿ ದಿನಾಂಕ 21-6-2019ರಂದು ಕಾಗೆಕೊಡಮಗ್ಗೆ ನೀರು ಬಳಕೆದಾರರ ಸಹಕಾರ ಸಂಘದಲ್ಲಿ ಆರಂಭಿಕ ಸಭೆ ಕರೆಯಲಾಗಿತ್ತು. ಸಹಜ ಸಮೃದ್ಧ ಸಂಸ್ಥೆಯ ಜಿ.ಕೃಷ್ಣಪ್ರಸಾದ್ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ಸಭೆಯಲ್ಲಿ ಗೊಂದಿ ಸಾವಯವ ಬೆಳೆಗಾರರ ಸಂಘ ಸ್ಥಾಪನೆಗೆ ಎಲ್ಲರ ಒಮ್ಮತ ದೊರೆಯಿತು. ಇದರ ಮುಂದುವರಿಕೆಯಾಗಿ ದಿನಾಂಕ 27-6-2019ರಂದು ಭದ್ರಾವತಿ ಸ್ಮೈಕ್ ಕಛೇರಿಯಲ್ಲಿ ಸಂಘದ ಪ್ರವರ್ತಕರ ಸಭೆ ನಡೆಯಿತು. 11 ಜನರ ಆಸಕ್ತ ರೈತರು ಮತ್ತು ಆಯ್ದ ಪ್ರವರ್ತಕರು 29 ಮತ್ತು 30ನೇ ಜೂನ್ 2019ರಂದು ಮೈಸೂರಿನಲ್ಲಿ ನಡೆದ ಮುಂಗಾರು ಬೀಜ ಮೇಳದಲ್ಲಿ ಭಾಗ ವಹಿಸಿ ಸಾವಯವ ಬೀಜೋತ್ಪಾದನೆ ತರಬೇತಿ ಪಡೆದರು. ಜೊತೆಗೆ ವಿವಿಧ ಭಾಗಗಳ ಬೀಜ ಸಂರಕ್ಷಕರು, ಸಾವಯವ ಮಾರಾಟಗಾರರ ಜೊತೆ ಮಾತುಕತೆ ನಡೆಸಲಾಯಿತು. 700ಕ್ಕೂ ಅಧಿಕ ಭತ್ತದ ತಳಿಗಳನ್ನು ಸಂರಕ್ಷಿಸುತ್ತಿರುವ ಕಿರುಗಾವಲಿನ ಘನಿ ಖಾನ್ ಅವರ ತೋಟಕ್ಕೂ ಭೇಟಿ ನೀಡಿ ಮಾಹಿತಿ ವಿನಿಮಯ ನಡೆಸಲಾಯಿತು.

**ಮೈಸೂರು ಬೀಜ ಮೇಳದಿಂದ ಬೀಜ ಖರೀದಿಸಿದವರ ವಿವರ**

| ರೈತರ ಹೆಸರು | ಗ್ರಾಮ | ಬೆಳೆ | ತಳಿ | ಪ್ರಮಾಣ (ಕೆ.ಜಿ.) |
|---|---|---|---|---|
| ಟಿ.ಕೆ.ಗಂಗಪ್ಪ | ದೊಡ್ಡಗೊಪ್ಪೇನಹಳ್ಳಿ | ಭತ್ತ<br>ರಾಗಿ<br>ತರಕಾರಿ<br>ಸಿರಿಧಾನ್ಯ | ರತ್ನಚೂಡಿ<br>ಜಗಳೂರು ರಾಗಿ<br>ಮೆಣಸಿನಕಾಯಿ, ಸೌತೆ<br>ಕೊರಲೆ | 2.5<br>10<br>0.5<br>1 |
| ನಂಜುಂಡಪ್ಪ | ದೊಡ್ಡಗೊಪ್ಪೇನಹಳ್ಳಿ | ಭತ್ತ | ರತ್ನಚೂಡಿ | 2.5 |
| ಮೀನಾಕ್ಷಮ್ಮ | ಅಗಸನಹಳ್ಳಿ | ತರಕಾರಿ | ಕೆಂಪು ಬದನೆ | 100 ಗ್ರಾಂ |
| ಮಹೇಂದ್ರ | ಡಣಾಯಕಪುರ | ಹುಲ್ಲಿನ ಬೀಜ<br>ಹಲಸು | <br>ಕೆಂಪು | 1<br>1 ಸಸಿ |
| ವೆಂಕಟೇಶ | ಸೀಗೆಬಾಗಿ/ಕಣಕಟ್ಟೆ | ಭತ್ತ<br>ತರಕಾರಿ | ಗಂಧ ಸಾಲೆ<br>ಬದನೆ, ಮೆಣಸು, ಸೊಪ್ಪು, ಬೀನ್ಸ್ | 1<br>300 ಗ್ರಾಂ |
| ಕುಮಾರ ನಾಯ್ಡು | ಹೊಳೆಭೈರನಹಳ್ಳಿ | ರಾಗಿ | ಜಗಳೂರು ರಾಗಿ | 20 |





ಜಿ.ಕೃಷ್ಣಪ್ರಸಾದ್‌ರವರಿಂದ ಮಾಹಿತಿ

## ಗೊಂದಿ ರೈತರ ರೇಡಿಯೋ ಸಂದರ್ಶನ

ದಿನಾಂಕ 27-6-2019ರಂದು ಭದ್ರಾವತಿ ಆಕಾಶವಾಣಿಯಿಂದ ಗೊಂದಿ ಯೋಜನಾ ವ್ಯಾಪ್ತಿಯ ರೈತರ ಸಂದರ್ಶನ ಮಾಡಲಾಯಿತು. ತಳ್ಳಿಕಟ್ಟೆ, ನಾಗತಿಬೆಳಗಲು, ಕಾಗೆಕೊಡ ಮಗ್ಗೆ, ಮೂಡಲವಿಠಲಾಪುರ, ಸೀಗೆಬಾಗಿ ಹಾಗೂ ದೊಡ್ಡ ಗೊಪ್ಪೇನಹಳ್ಳಿಯ 29 ರೈತರು, ಸಂಘಗಳ ಪದಾಧಿಕಾರಿಗಳು, ಮಹಿಳಾ ಉಪಸಮಿತಿ ಸದಸ್ಯರು ಹಾಗೂ ಅಚ್ಚುಕಟ್ಟಿನ ರೈತರು ತಮ್ಮ ಅನಿಸಿಕೆ ಹಾಗೂ ಅನುಭವಗಳನ್ನು ಹಂಚಿಕೊಂಡರು. ಆಯಾ ಗ್ರಾಮಗಳಲ್ಲಿಯೇ ಸಂದರ್ಶನ ನಡೆದಿದ್ದು ವಿಶೇಷ. ಆಕಾಶವಾಣಿಯ ಸುಬ್ರಹ್ಮಣ್ಯ ಅವರು ಗೊಂದಿ ಆಧುನೀಕರಣದಿಂದಾಗಿ ರೈತರಿಗೆ ಆಗಿರುವ ನೀರಿನ ಉಳಿತಾಯ, ನೀರು ನಿರ್ವಹಣೆ, ಕೃಷಿಯಲ್ಲಿ ನೂತನ ವಿಧಾನಗಳ ಅಳವಡಿಕೆ, ಜೀವನೋಪಾಯ ಉತ್ತೇಜನ ಇತ್ಯಾದಿಗಳ ಬಗ್ಗೆ ಪ್ರಶ್ನೆಗಳನ್ನು



ಕೇಳುವ ಮೂಲಕ ಮಾಹಿತಿ ಪಡೆದರು. ಕೃಷಿರಂಗ ವಿಭಾಗದಲ್ಲಿ ಈ ಸಂದರ್ಶನಗಳು ಪ್ರಸಾರವಾಗಲಿವೆ.

## ಅಣಬೆ ಅರಳುವ ಕುತೂಹಲ

ಯೋಜನಾ ವ್ಯಾಪ್ತಿಯ ಮಹಿಳೆಯರ ಜೀವನೋಪಾಯ ಉತ್ತಮಪಡಿಸಲು ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅದರಲ್ಲಿ ಅಣಬೆ ಬೆಳೆಸಲು ಉತ್ತೇಜನ ನೀಡುವುದು ಮುಖ್ಯವಾದುದು. ಮಹಿಳೆಯರು ಆರ್ಥಿಕವಾಗಿ ಸದೃಡರಾಗಲು ಮತ್ತು ಪೋಶಕಾಂಶ ಕೊರತೆಯನ್ನು ನೀಗಲು ಅಣಬೆ ಸಹಾಯಕ. ವಿವಿಧ ಗ್ರಾಮಗಳಿಂದ ಆಸಕ್ತರನ್ನು ಆಯ್ಕೆ ಮಾಡಿ ದಿನಾಂಕ 20-7-2019ರಂದು ಶಿವಮೊಗ್ಗದ ಜೈವಿಕ ಕೇಂದ್ರದಲ್ಲಿ ಒಂದು ದಿನದ ತರಬೇತಿ ಹಮ್ಮಿಕೊಳ್ಳಲಾಗಿತ್ತು. ಸಹಾಯಕ




ತೋಟಗಾರಿಕೆ ನಿರ್ದೇಶಕರಾದ ಪ್ರತಿಭಾ ಹಾಗೂ ಸಹಾಯಕ ತೋಟಗಾರಿಕೆ ಅಧಿಕಾರಿ ವೇದಾವತಿ ಅವರು ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿದ್ದರು.

ಈ ಸಂದರ್ಭದಲ್ಲಿ ವಿವಿಧ ರೀತಿಯ ಅಣಬೆ ತಳಿಗಳು, ಅವುಗಳನ್ನು ಮನೆಯಲ್ಲೇ ಬೆಳೆಸುವ ವಿಧಾನ, ವಾಣಿಜ್ಯವಾಗಿ ಬೆಳೆಯುವಾಗ ತೆಗೆದುಕೊಳ್ಳಬೇಕಾದ ಕ್ರಮಗಳು, ಮಾರುಕಟ್ಟೆ ಸಾಧ್ಯತೆಗಳು ಮುಂತಾದ ಹಲವು ಮಗ್ಗುಲುಗಳ ಬಗ್ಗೆ ಮಾಹಿತಿ ತಿಳಿಸಲಾಯಿತು. ಜೊತೆಗೆ ಪ್ರತಿಯೊಬ್ಬರಿಗೂ 250 ಗ್ರಾಂ ಅಣಬೆ ಬೀಜ ಹಾಗೂ ಸಿದ್ಧವಾದ ಒಂದು ಅಣಬೆ ಬ್ಯಾಗ್(Ready to fruit) ನೀಡಲಾಯಿತು.

ತರಬೇತಿಗೆ ನಿರೀಕ್ಷೆಗೂ ಮೀರಿ 67 ಮಹಿಳೆಯರು ಮತ್ತು 4 ಪುರುಷರು ಸೇರಿದಂತೆ 71 ಜನ ಭಾಗವಹಿಸಿದ್ದರು. ಬೀಜ ಪಡೆದ ಎಲ್ಲರೂ ಈಗಾಗಲೇ ಅಣಬೆ ಬೆಳೆಯಲು ಆರಂಭಿಸಿರುವುದು ವಿಶೇಷ. ಬಾಬಳ್ಳಿಯ ಲೀಲಾವತಿಯವರು 'ನಮಗೆ ವಾಣಿಜ್ಯವಾಗಿ ದೊಡ್ಡ ಪ್ರಮಾಣದಲ್ಲಿ ಅಣಬೆ ಬೆಳೆಯಲು ಆಸಕ್ತಿ ಇದೆ, ಇದಕೆ ಸೂಕ್ತ ಮಾರ್ಗದರ್ಶನ ಬೇಕಿದೆ' ಎನ್ನುತ್ತಾರೆ.

## ರೈತ ಸಂಘದ ಮುಖಂಡರಿಂದ ಗೊಂದಿ ನಾಲೆ ಭೇಟಿ

ಮುಖ್ಯ ಕಾಲುವೆ ಹಾಗೂ ಹೊಲಗಾಲುವೆಗಳ ಕಾಮಗಾರಿಗಳು ನಿಗದಿತ ಅವಧಿಯಲ್ಲಿ ಮುಕ್ತಾಯವಾಗದಿರುವುದರಿಂದ ಸರ್ಕಾರವು ಅವಧಿಯನ್ನು ವಿಸ್ತರಿಸಿದೆ. ಜೂನ್-ಜುಲೈ ಅವಧಿಯಲ್ಲಿ ಈ ಕಾಮಗಾರಿಗಳನ್ನು ಮುಗಿಸಲೇಬೇಕಿರುವುದರಿಂದ ಗೊಂದಿ ನಾಲೆಗೆ ನೀರು ಬಿಡಲು ಸಾಧ್ಯವಾಗದು. ಇದನ್ನು ರೈತರಿಗೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಗೊಂದಿ ಒಕ್ಕೂಟವು ರೈತ ಸಂಘದ ಮುಖಂಡರನ್ನು ನಾಲೆ ವೀಕ್ಷಣೆಗೆ ಆಹ್ವಾನಿಸಿತ್ತು. ಇದರಂತೆ ಶಿವಮೊಗ್ಗ ಜಿಲ್ಲೆಯ ರೈತ ಮುಖಂಡರಾದ ಕೆ.ಟಿ.ಗಂಗಾಧರ್ ಹಾಗೂ ಹೆಚ್.ಆರ್.ಬಸವರಾಜಪ್ಪ ಅವರ ತಂಡವು ಎರಡು ದಿನ ಅಣೆಕಟ್ಟೆ ಹಾಗೂ ಕಾಲುವೆಯ ಕಾಮಗಾರಿಗಳನ್ನು ವೀಕ್ಷಣೆ ಮಾಡಿದರು. ಈ ಸಂದರ್ಭದಲ್ಲಿ



ಗೊಂದಿ ಒಕ್ಕೂಟದ ಅಧ್ಯಕ್ಷರಾದ ಟಿ.ಎಸ್.ಮಂಜುನಾಥ್ ಹಾಗೂ ವಿವಿಧ ನೀರು ಬಳಕೆದಾರ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಹಾಜರಿದ್ದರು.

# ಪರಿಸರ ಮತ್ತು ಸಾಮಾಜಿಕ ಸುರಕ್ಷೆಯ ಮಹತ್ವ

ಗೊಂದಿ ಆಧುನೀಕರಣ ಯೋಜನೆಯಲ್ಲಿ ಪರಿಸರ ಮತ್ತು ಸಾಮಾಜಿಕ ಸುರಕ್ಷೆಯ ಬಗ್ಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಅನುದಾನದ ಯೋಜನೆಗಳಲ್ಲಿ ಇದು ಕಡ್ಡಾಯವಾಗಿರುತ್ತದೆ.

ಯೋಜನೆಯಲ್ಲಿ ಗುತ್ತಿಗೆದಾರರು ಪರಿಸರಕ್ಕೆ ಯಾವುದೇ ಹಾನಿ ಉಂಟು ಮಾಡದೆ ಕೆಲಸ ನಿರ್ವಹಿಸಬೇಕಾಗಿರುತ್ತದೆ, ಜೊತೆಗೆ ಕೆಲಸದಲ್ಲಿ ತೊಡಗಿರುವ ಕಾರ್ಮಿಕರ ಸುರಕ್ಷೆಗೂ ಗಮನ ಹರಿಸುವುದು ಕಡ್ಡಾಯ. ಅವರು ಈ ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಮೂರು ತಿಂಗಳಿಗೆ ಒಮ್ಮೆ ಮಾಡಲೇಬೇಕಾಗಿರುತ್ತದೆ.


1. ಕಾಮಗಾರಿ ನಡೆಯುವ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರ ವಹಿಸುವುದು. ಉದಾ.: ಮಣ್ಣು, ಜೆಲ್ಲಿ ಮುಂತಾದವುಗಳನ್ನು ಜನನಿಬಿಡ ಸ್ಥಳದಲ್ಲಿ ಹಾಕದಂತೆ ಎಚ್ಚರ ವಹಿಸುವುದು, ಶಾಲೆಯ ಹತ್ತಿರ, ಗ್ರಾಮದಲ್ಲಿ, ಕೆಲಸ ಮಾಡುವ ಜಾಗದಲ್ಲಿ ಕಡ್ಡಾಯವಾಗಿ ಸೂಚನಾ ಫಲಕಗಳನ್ನು ಹಾಕುವುದು.
2. ಕಾಮಗಾರಿ ನಡೆಯುವ ಜಾಗದಲ್ಲಿ ಯಾವುದೇ ತರಹದ ಮರಗಳನ್ನು ಕಡಿಯುವ ಸಂದರ್ಭ ಬಂದರೆ 1 ಮರಕ್ಕೆ ಪ್ರತಿಯಾಗಿ 3 ಗಿಡಗಳನ್ನು ನೆಡುವುದು ಕಡ್ಡಾಯವಾಗಿರುತ್ತದೆ.
3. ಯೋಜನಾ ವ್ಯಾಪ್ತಿಯ ಯಾವುದೇ ತರಹದ ಮೂಲ ಸೌಕರ್ಯಗಳಿಗೆ ಹಾನಿಯಾಗದಂತೆ ಕೆಲಸಗಳನ್ನು ಮಾಡುವುದು ಈ ಯೋಜನೆಯಲ್ಲಿ ಬಹುಮುಖ್ಯ. ಇದಕ್ಕೆ ಸಂಬಂಧಿಸಿದಂತೆ ವಿದ್ಯುತ್ ಕಂಬಗಳು ಕಾಲುವೆಯ ಸೇವಾ ರಸ್ತೆಯಲ್ಲಿ ಇದ್ದುದರಿಂದ ವಿದ್ಯುತ್ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿ ತೆರವುಗೊಳಿಸಿದ ನಂತರವೇ ಕಾಮಗಾರಿ ಮಾಡಲಾಯಿತು.
4. ಕಾರ್ಮಿಕರ ಶಿಬಿರ: ಈ ಯೋಜನೆಯಲ್ಲಿ ಕೆಲಸ ಮಾಡುವ ಕಾರ್ಮಿಕರುಗಳಿಗೂ ಸಹ ಸೂಕ್ತ ಸೌಕರ್ಯಗಳನ್ನು ಕಲ್ಪಿಸುವುದು ಗುತ್ತಿಗೆದಾರರ ಪ್ರಮುಖ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ ಗುತ್ತಿಗೆದಾರರು ಯೋಜನಾ ವ್ಯಾಪ್ತಿಯ ಕೋಡಿಹಳ್ಳಿ ಗ್ರಾಮದಲ್ಲಿ ಕ್ಯಾಂಪ್ ಮಾಡಿದ್ದು ಅಲ್ಲಿ ಕಾರ್ಮಿಕರಿಗೆ ವಾಸಿಸಲು ಸೂಕ್ತ ವಸತಿ, ಶೌಚಾಲಯ ವ್ಯವಸ್ಥೆ ಮಾಡಿದ್ದಾರೆ. ಆಗಾಗ ಆರೋಗ್ಯ ತಪಾಸಣೆಯನ್ನೂ ಮಾಡಿಸುತ್ತಿದ್ದಾರೆ. ಸ್ಥಳೀಯ ಡಾಕ್ಟರುಗಳಿಂದ ಪ್ರತಿ ತಿಂಗಳು ಮಾಡಿಸಿದ ನೊಂದಾವಣಿ ಪುಸ್ತಕವನ್ನು ಎ.ಡಿ.ಬಿಗೆ ಸಲ್ಲಿಸಬೇಕಾಗಿರುತ್ತದೆ.
5. ಕಾರ್ಮಿಕರು ಉಳಿದುಕೊಳ್ಳುವ ಜಾಗದಲ್ಲಿ ಅಡುಗೆ ಮಾಡಲು ಸಲುವಾಗಿ ಯಾವುದೇ ತರಹದ ಮರಗಳನ್ನು ಕಡಿಯುವಂತಿಲ್ಲ. ಆದ್ದರಿಂದ ಗುತ್ತಿಗೆದಾರರು ಗ್ಯಾಸ್ ಸಿಲಿಂಡರ್ ವ್ಯವಸ್ಥೆ ಮಾಡಿರುತ್ತಾರೆ.
6. ಮಾಲಿನ್ಯದ ಬಗ್ಗೆ ಎಚ್ಚರ ವಹಿಸುವುದು: ಕಾಮಗಾರಿ ನಡೆಯುವ ವೇಳೆ ಲಾರಿಗಳು, ಟ್ರಕ್‌ಗಳು ಚಲಿಸುವ ಮಾರ್ಗ ದಲ್ಲಿ ಧೂಳು ಏಳದಂತೆ ರಸ್ತೆಗೆ ನೀರನ್ನು ಸಿಂಪಡಿಸುವುದು, ಹಳ್ಳಿಗಳಲ್ಲಿ ಹಾದು ಹೋಗುವಾಗ ಹಾರನ್ ಬಳಸದೇ ಇರುವುದು, ವೇಗವನ್ನು ಗಂಟೆಗೆ 30 ಕಿ.ಮೀ.ಗೆ ಕಡಿತಗೊಳಿಸುವುದು, ಕಾಮಗಾರಿ ಚಾಲನೆ ಮಾಡುವುದಕ್ಕೆ ಮೊದಲು ಅಂತರ್ಜಲ ಪರೀಕ್ಷಿಸುವುದು ಮುಂತಾದ ಕ್ರಮಗಳನ್ನು ಗುತ್ತಿಗೆದಾರರು ಕೈಗೊಂಡಿರುತ್ತಾರೆ. ಸ್ಮೆಕ್ ಸಂಸ್ಥೆಯ ಪರಿಸರ ತಜ್ಞರು ಮತ್ತು ಸ್ಥಾನಿಕ


ತೋಟಕ್ಕೆ ಹೂಳು ಹಾಕಿರುವುದು




ಧೂಳು ಏಳದಂತೆ ನೀರು ಸಿಂಪಡಣೆ


ಮರ ಕಡಿದಿರುವುದು


Jawaharlal Nehru National College of Engineering

DEPARTMENT OF CIVIL ENGINEERING

SHIMOGA - 577 204
KARNATAKA STATE

To


Sir,

Sub: Testing of Bore well Water sample for Modernization of Left Bank canal and right Bank canal of Gondhi anicut in Bhadravti taluk shimoga dist

| Sl.No | Parameters | Sample 1 | Sample 2 | Sample 3 | Limits |
|---|---|---|---|---|---|
| 1 | pH | 7.3 | 7.3 | 7.4 | 6.5-8.5 |
| 2 | Acidity mg/L | 69 | 10 | 10 | 200 |
| 3 | Alkalinity mg/L | 171 | 198 | 202 | 300 |
| 4 | Hardness mg/L | 146 | 414 | 422 | 600 |
| 5 | Calcium mg/L | 18 | 55 | 60 | 75 |
| 6 | Chloride mg/L | 190 | 350 | 190 | 250 |
| 7 | Colour Smell | Nil | Nil | Nil | - |
| 8 | Dissolved Oxygen mg/L | 4.6 | 4.9 | 5.1 | [illegible] |
| 9 | Turbidity NTU | 02 | 04 | 03 | [illegible] |
| 10 | Total dissolved solids mg/L | 312 | 368 | 386 | [illegible] |
| 11 | Iron mg/L | 0.001 | 0.002 | 0.002 | 0.3 |
| 12 | Fluoride mg/L | 00 | 00 | 00 | 1.5 |
| 13 | Sulphate mg/L | 29 | 69 | 74 | 200 |

Lab Instructor   Staff-in-charge   Coordinator   Principal

ಅಂತರ್ಜಲ ಮಟ್ಟದ ವರದಿ


ಹೂಳು ತೋಟಕ್ಕೆ ಹಾಕಲು ರೈತರಿಂದ ಅನುಮತಿ

ಇಂಜಿನಿಯರ್ ಇವುಗಳನ್ನು ಆಗಾಗ ಪರಿಶೀಲಿಸಿರುತ್ತಾರೆ.

7. ಕಾಲುವೆಗಳಿಗೆ ಉಪಯೋಗಿಸಲು ಮಣ್ಣನ್ನು ಅನುಮೋದಿತ ಕ್ವಾರಿಗಳಲ್ಲಿಯೇ ತೆಗೆಯುವುದು ಕಡ್ಡಾಯ. ಅದರಂತೆ ಡಣಾಯಕಪುರ (ಹೊಳೆ ಹೊನ್ನೂರು) ಕ್ವಾರಿಯಲ್ಲಿ ಮಣ್ಣನ್ನು ತೆಗೆದ ನಂತರ ರೈತನ ಆದೇಶದ ಮೇರೆಗೆ ಆತನಿಗೆ ಬೇಕಾದ ಅಡಿಕೆ ಮರವನ್ನು ಹಾಕಲು ಜಾಗವನ್ನು ಮಾಡಿಕೊಡಲಾಯಿತು. ಅದರಂತೆಯೇ ಕನಸಿನಕಟ್ಟೆ ಕ್ವಾರಿಯಲ್ಲಿ ಮಣ್ಣನ್ನು ತೆಗೆಯುವ ವೇಳೆ ಆ ಜಾಗದ ರೈತರೊಂದಿಗೆ ಸ್ಮೆಕ್ ಸಂಸ್ಥೆಯ ಅಧಿಕಾರಿಗಳು ಚರ್ಚಿಸಿದರು.

8. ಮುಖ್ಯ ಕಾಲುವೆಗಳಲ್ಲಿ ತೆಗೆದ ಹೂಳನ್ನು ದೂರಕ್ಕೆ ಒಯ್ದು ಹಾಕ ಬೇಕಾಗಿರುತ್ತದೆ. ಆದರೆ ಆ ಮಣ್ಣು ಫಲವತ್ತಾಗಿದ್ದುದರಿಂದ ಕಾಲುವೆ ಪಕ್ಕದ ರೈತರು ತಮ್ಮ ಜಮೀನಿಗೆ ಹಾಕುವಂತೆ ಗುತ್ತಿಗೆ ದಾರರಿಗೆ ಕೇಳಿಕೊಂಡ ಸಂದರ್ಭದಲ್ಲಿ ಎ.ಡಿ.ಬಿ.ಯ ನಿಯಮ ಪ್ರಕಾರ ಆಯಾ ರೈತರ ಸಹಿ ಮತ್ತು ಫೋಟೊದೊಂದಿಗೆ ವರದಿ ಮಾಡಲಾಗಿದೆ. ಗೊಂದಿ ಯೋಜನೆ ಮುಕ್ತಾಯವಾಗುವವರೆಗೆ ಪ್ರತಿ ಆರು ತಿಂಗಳಿಗೊಮ್ಮೆ ವರದಿಗಳನ್ನು ಎ.ಡಿ.ಬಿ.ಗೆ ಕಳುಹಿಸ ಬೇಕಾಗಿರುತ್ತದೆ.

ಈ ಯೋಜನೆಯಲ್ಲಿ 'ಪರಿಸರ ಮತ್ತು ಸಾಮಾಜಿಕ ಸುರಕ್ಷೆ' ಕುರಿತು ಮೂರು ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿದೆ. ಅದರ ವಿವರ ಹೀಗಿದೆ.

| ತರಬೇತಿ ದಿನಾಂಕ | ಭಾಗವಹಿಸಿದವರು | ಮಹಿಳೆ | ಪುರುಷ | ಒಟ್ಟು |
|---|---|---|---|---|
| 27–2–2016 | ಕೆ.ಎನ್.ಎನ್.ಎಲ್. ಕಾಡಾ ಇಂಜಿನಿಯರ್‌ಗಳು ಹಾಗೂ ಗುತ್ತಿಗೆದಾರರು | 5 | 35 | 40 |
| 16–3–2019 | ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಕಾರ್ಯದರ್ಶಿಗಳು | 5 | 34 | 39 |
| 21–6–2019 | ಕೆ.ಎನ್.ಎನ್.ಎಲ್. ಮತ್ತು ಕಾಡಾ ಇಂಜಿನಿಯರುಗಳು | 4 | 19 | 23 |
| | ಒಟ್ಟು | 14 | 88 | 102 |


ರಸ್ತೆಯಲ್ಲಿ ಸೂಚನಾ ಫಲಕ


ಹಳ್ಳಿಯಲ್ಲಿ ಸೂಚನಾ ಫಲಕ


ತರಬೇತಿ


ಮಣ್ಣು ಕ್ವಾರಿ ಪರಿಶೀಲನೆ


ಕ್ವಾರಿಯಲ್ಲಿ ಮಣ್ಣು ತೆಗೆದ ನಂತರ ಹೊಲ ಸಮತಟ್ಟು ಮಾಡಿರುವುದು


ಗಿಡ ನೆಡುತ್ತಿರುವುದು

ಒಟ್ಟಾರೆ ಗೊಂದಿ ಯೋಜನೆಯಲ್ಲಿ 'ಪರಿಸರ ಮತ್ತು ಸಾಮಾಜಿಕ ಸುರಕ್ಷೆಗೆ' ಯಾವುದೇ ತರಹದ ಹಾನಿಯಾಗದಂತೆ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ.

– ದೀಪಕ್‌ಕುಮಾರ್, ಸ್ಥಾನಿಕ ಇಂಜಿನಿಯರ್, ಸ್ಮೆಕ್ ಸಂಸ್ಥೆ

## ಬಾರಂದೂರಿನಲ್ಲಿ ಗಿಡ ನೆಡುವ ಕಾರ್ಯಕ್ರಮ

**11-6-2019**ರಂದು ಬಾರಂದೂರಿನ ನೀರು ಬಳಕೆದಾರರ ಸಹಕಾರ ಸಂಘ ಮತ್ತು ಗ್ರಾ.ಪಂ. ವತಿಯಿಂದ ಹಳ್ಳಿಕೆರೆ ಮತ್ತು ಬಾರಂದೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪರಿಸರ ದಿನಾಚರಣೆಯನ್ನು ಶಾಲೆಯಲ್ಲಿ **60** ಹೊಂಗೆ, ಮಾವು, ನೇರಳೆ, ಬೇವು ಸಸಿ ನೆಡುವ ಮೂಲಕ ಆಚರಿಸಲಾಯಿತು. ಸಂಘವು ಸ್ವಪ್ರೇರಣೆಯಿಂದ ಇದನ್ನು ಆಚರಿಸಿದ್ದು ವಿಶೇಷ.



# ಬದುಕು ಬೆಸೆಯುವ ಹೊಲಿಗೆ – ಟೈಲರಿಂಗ್


ಹಳ್ಳಿ ಹೆಣ್ಣುಮಕ್ಕಳಿಗೆ ಟೈಲರಿಂಗ್ ಒಂದು ಬಹುಮುಖ್ಯ ಆದಾಯೋತ್ಪನ್ನ ಚಟುವಟಿಕೆ. ಕಡಿಮೆ ಬಂಡವಾಳ ಹಾಗೂ ಸ್ಥಳಾವಕಾಶದಲ್ಲಿ ಇದನ್ನು ಕೈಗೊಳ್ಳಬಹುದು. ಬಿಡುವಿನ ವೇಳೆಯಲ್ಲಿ ದುಡಿಮೆ ಮಾಡಲು ಸೂಕ್ತ. ಮನೆಯವರ ಬಟ್ಟೆಗಳನ್ನು ಹೊಲೆದರೂ ಸಹ ಉಳಿತಾಯವಾಗುತ್ತದೆ. ಇದನ್ನು ಮನಗಂಡು ಯೋಜನೆಯಲ್ಲಿ ಆಸಕ್ತ ಮಹಿಳೆಯರಿಗೆ ಟೈಲರಿಂಗ್ ತರಬೇತಿ ನೀಡಲಾಗುತ್ತಿದೆ.

2019ರಲ್ಲಿ ಶಿವಮೊಗ್ಗದ ಜನ ಶಿಕ್ಷಣ ಸಂಸ್ಥೆ(ಜೆ.ಎಸ್.ಎಸ್.) ಸಹಯೋಗದಲ್ಲಿ ವ್ಯವಸ್ಥಿತವಾಗಿ ತರಬೇತಿಗಳನ್ನು ಆಯೋಜಿಸ ಲಾಗುತ್ತಿದೆ. ಇದು 120 ದಿನಗಳ ತರಬೇತಿಯಾಗಿದ್ದು, ಆಯಾ ಊರುಗಳಲ್ಲೇ ಸಮುದಾಯ ಭವನ ಅಥವಾ ಶಾಲೆಗಳಲ್ಲಿ ನಡೆಸ ಲಾಗುತ್ತದೆ. ಇದರಿಂದ ಮಹಿಳೆಯರು ಮತ್ತು ಯುವತಿಯರು ಮನೆಯ ಹಾಗೂ ಬೇಸಾಯದ ಕೆಲಸಕ್ಕೂ ಸಹ ಕೈಜೋಡಿಸಿ ತರಬೇತಿ ಕೌಶಲ್ಯ ಪಡೆಯಲು ಅನುಕೂಲವಾಗಿದೆ. ಜೆ.ಎಸ್.ಎಸ್. ಸಂಸ್ಥೆಯು ಹೊಲಿಗೆ ಕಲಿಸುವ ಶಿಕ್ಷಕಿಗೆ ಸಂಬಳ, ಕಲಿಕಾ ಸಲಕರಣೆ ಗಳು, 4–5 ಮಶಿನ್‌ಗಳನ್ನು ಒದಗಿಸುತ್ತದೆ. ಜೊತೆಗೆ ಕಲಿಕಾರ್ಥಿ ಗಳಿಗೆ ತರಬೇತಿ ಕೊನೆಯಲ್ಲಿ ಸರ್ಟಿಫಿಕೇಟ್ ನೀಡುತ್ತದೆ. ತರಬೇತಿಗೆ ಯಾವುದೇ ಶುಲ್ಕ ಇರುವುದಿಲ್ಲ, ಆದರೆ ನೋಂದಣಿ ಶುಲ್ಕವಾಗಿ 140 ರೂ. ಹಾಗೂ 65 ರೂ. ಮೌಲ್ಯದ ಹೊಲಿಗೆ ತರಬೇತಿ ಕೈಪಿಡಿ ನೀಡಲಾಗುತ್ತದೆ.

ತರಬೇತಿ ಬಗ್ಗೆ ಹೇಳುವ ಕೆರೆಬೀರನಹಳ್ಳಿಯ ಸುಮಾ 'ನಮಗೆ ಇದನ್ನು ಕಲಿತಿರುವುದರಿಂದ ಮನೆ ಖರ್ಚಿಗೆ ಹಣ ಸಿಗುತ್ತದೆ, ತುಂಬಾ ಅನುಕೂಲವಾಗಿದೆ' ಎನ್ನುತ್ತಾರೆ. ಕವಿತಾ ಅವರು 'ನಾವಿರುವ ಊರಿನಲ್ಲೇ ತರಬೇತಿ ನೀಡುತ್ತಿರುವುದು ಹೆಣ್ಣುಮಕ್ಕಳಿಗೆ ತುಂಬಾ ಅನುಕೂಲವಾಗಿದೆ' ಎನ್ನುತ್ತಾರೆ. ಈವರೆಗೆ ನಡೆದಿರುವ ತರಬೇತಿಗಳ ವಿವರ ಹೀಗಿದೆ.


ಕೊಪ್ಪ ದೊಡ್ಡಕೆರೆಯಲ್ಲಿ ಟೈಲರಿಂಗ್ ಶಿಬಿರ


| ಗ್ರಾಮ | ಆರಂಭವಾದ ದಿನಾಂಕ | ಸಾಮಾನ್ಯ ವರ್ಗ | ಎಸ್ಸಿ/ ಎಸ್ಟಿ | ಅಲ್ಪ ಸಂಖ್ಯಾತ | ಒಟ್ಟು |
|---|---|---|---|---|---|
| 1) ಕೆರೆಬೀರನಹಳ್ಳಿ | 24–4–2019 | 39 | 8 | 0 | 47 |
| 2) ಕೊಪ್ಪದೊಡ್ಡಕೆರೆ | 24–4–2019 | 34 | 18 | 0 | 52 |
| 3) ಜಂಭರಘಟ್ಟ | 2–7–2019 | 0 | 10 | 18 | 28 |
| 4) ಡಣಾಯಕಪುರ | 10–7–2019 | 21 | 0 | 0 | 21 |
| | ಒಟ್ಟು | 94 | 36 | 18 | 148 |


ಕೆರೆಬೀರನಹಳ್ಳಿಯಲ್ಲಿ ಟೈಲರಿಂಗ್ ಕಲಿಕೆ

ಸ್ಕೈಕ್ ಸಂಸ್ಥೆಯು ಸದರಿ ತರಬೇತಿಗಳಿಗೆ ಮಹಿಳೆಯರನ್ನು ಸಂಘಟನೆ ಮಾಡುವ ಹಾಗೂ ಮೇಲುಸ್ತುವಾರಿ ಮಾಡುವ ಜವಾಬ್ದಾರಿ ಹೊತ್ತಿದೆ. ಅಲ್ಲದೆ ಕೊಪ್ಪ ದೊಡ್ಡಕೆರೆ ತರಬೇತಿ ಕೇಂದ್ರಕ್ಕೆ ಕಲಿಕಾ ಸಾಮಗ್ರಿ ಸಹ ನೀಡಿದೆ. ಅಲ್ಲದೆ ವಿವಿಧ ಬ್ಯಾಂಕುಗಳೊಂದಿಗೆ ಮಾತನಾಡಿ ಹೊಲಿಗೆ ಕೈಗೊಳ್ಳಲು ಸಾಲ ಒದಗಿಸಲು ಮನವಿ ಸಲ್ಲಿಸಲಾಗಿದೆ.

– ಮಲ್ಲಿಕಾರ್ಜುನ, ಸ್ಕೈಕ್ ಸಂಸ್ಥೆ

## ಎರೆಗೊಬ್ಬರದ ಗೋಡೆ ಬರಹ




ಯೋಜನೆಯಲ್ಲಿ ಎರೆಗೊಬ್ಬರ ಘಟಕ ನಿರ್ಮಾಣಕ್ಕೆ ಹೆಚ್ಚಿನ ಉತ್ತೇಜನ ನೀಡಲಾಗುತ್ತಿದೆ. ಇದರ ಪರಿಣಾಮದಿಂದ ಈಗಾಗಲೇ 30ಕ್ಕೂ ಅಧಿಕ ರೈತರು ಘಟಕ ನಿರ್ಮಿಸಿಕೊಂಡು ಗೊಬ್ಬರ ಉತ್ಪಾದನೆಯಲ್ಲಿ ತೊಡಗಿದ್ದಾರೆ. ಸುಸ್ಥಿರ ಕೃಷಿ ಅಳವಡಿಕೆಗೆ ರಸಗೊಬ್ಬರಗಳನ್ನು ಕಡಿಮೆ ಬಳಸುವುದು ಅನಿವಾರ್ಯ. ಇದಕ್ಕೆ ಉತ್ತಮ ಪರ್ಯಾಯವೆಂದರೆ ಎರೆಗೊಬ್ಬರ. ಇನ್ನಷ್ಟು ರೈತರನ್ನು ಈ ವಿಧಾನ ಅಳವಡಿಸಿ ಕೊಳ್ಳಲು ಪ್ರೇರೇಪಿಸುವ ಸಲುವಾಗಿ ಯೋಜನಾ ಗ್ರಾಮಗಳಲ್ಲಿ ಎರೆಘಟಕ ಮಾಹಿತಿ ನೀಡುವ ಗೋಡೆ ಬರಹಗಳನ್ನು ಬರೆಸ ಲಾಗಿದೆ. ಚಿತ್ರ ಹಾಗೂ ಮಾಹಿತಿ ಎರಡನ್ನೂ ಇದು ನೀಡುವುದು ವಿಶೇಷ.

# ತರಕಾರಿ ಬೀಜ ಸಂಗ್ರಹಣಾ ವಿಧಾನಗಳು

ತರಕಾರಿ ಬಿತ್ತನೆ ಬೀಜಗಳ ಗುಣಮಟ್ಟವು ಅವುಗಳನ್ನು ಸಂರಕ್ಷಣೆ ಮಾಡುವುದರ ಮೇಲೆ ಅವಲಂಬಿತವಾಗಿದೆ. ಈ ಹಿಂದೆ ರೈತ ಸಮುದಾಯಗಳು ಬಿತ್ತನೆ ಬೀಜಗಳನ್ನು ಜತನದಿಂದ ಸಂರಕ್ಷಿಸಿ, ಮುಂದಿನ ಹಂಗಾಮಿಗೆ ಬರುವಂತೆ ನೋಡಿಕೊಳ್ಳುತ್ತಿದ್ದವು. ಕೆಲವು ತಳಿಯ ಬೀಜಗಳು ಎರಡು–ಮೂರು ವರ್ಷಗಳ ನಂತರವೂ ಬಿತ್ತನೆಗೆ ಬಳಕೆಯಾಗುತ್ತಿದ್ದವು. ಬೂದಿ ಹಾಗೂ ಸಗಣಿಯೊಂದಿಗೆ ಬೀಜ ಬಚ್ಚಿಡುತ್ತಿದ್ದ ವಿಧಾನಗಳ ಬಗ್ಗೆ ಈಗಾಗಲೇ ಮಾಹಿತಿ ಕೊಡಲಾಗಿದೆ. ಇದರ ಜತೆಗೆ, ಬೇವು ಹಾಗೂ ಲಕ್ಕಿ ಗಿಡದ ಎಲೆಗಳನ್ನು ಬೆರೆಸಿಟ್ಟರೆ ಬಹುದಿನಗಳ ಕಾಲ ಕೀಟಗಳು ಅದರತ್ತ ಸುಳಿಯುವುದಿಲ್ಲ.

ಬೀಜಗಳನ್ನು ಸೋರೆಕಾಯಿ ಅಥವಾ ಮಣ್ಣಿನ ಮಡಿಕೆಯಲ್ಲಿ ಸಂಗ್ರಹಿಸಿ ಇಡುವ ಪರಿಪಾಠವಿದೆ. ಹೀಗೆ ಇಡುವ ಮುನ್ನ, ಬೀಜಗಳನ್ನು ಗೋಮೂತ್ರದಲ್ಲಿ ನೆನೆಸಿ, ಬೂದಿಯಲ್ಲಿ ಉರುಳಾಡಿಸಿ ನೆರಳಿನಲ್ಲಿ ಒಣಗಿಸುವುದು ಕಡ್ಡಾಯ. ಬೀಜಗಳನ್ನು ಯಾವತ್ತೂ ಕತ್ತಲಿನಲ್ಲೇ ಸಂಗ್ರಹಿಸಿ ಇಡಬೇಕು. ಬೆಳಕಿಗೆ ಸುಲಭವಾಗಿ ಈಡಾಗುವ ಪಾರದರ್ಶಕ ಪ್ಲಾಸ್ಟಿಕ್ ಅಥವಾ ಬ್ಯಾಗ್‌ಗಳಲ್ಲಿ ಇಡುವುದು ಒಳ್ಳೆಯದಲ್ಲ. ಕಾಗದ ಅಥವಾ ಬಟ್ಟೆಯ ಬ್ಯಾಗ್ ಕಡಿಮೆ ಸ್ಥಳಾವಕಾಶದಲ್ಲಿ ಹೆಚ್ಚು ಬೀಜ ಸಂಗ್ರಹಕ್ಕೆ ಒಳ್ಳೆಯ ಅವಕಾಶ. ಮಳೆಗಾಲದಲ್ಲಿ ತೇವಾಂಶ ಕಡಿಮೆ ಮಾಡಲು ಸಂಗ್ರಹಣಾ ಕೊಠಡಿಯಲ್ಲಿ ಒಂದು ಬಲ್ಬ್ ಹಾಕಬಹುದು.

ತಂಪು ಹಾಗೂ ಒಣ ವಾತಾವರಣದಲ್ಲಿ ಬೀಜಗಳ ಸಂಗ್ರಹ ಮಾಡಬಹುದು. ವಿಪರೀತ ಉಷ್ಣತೆ ಹಾಗೂ ತೇವಾಂಶ ಇದ್ದರೆ ಬೀಜದ ಮೊಳಕೆ ಸಾಮರ್ಥ್ಯಕ್ಕೆ ಧಕ್ಕೆಯಾಗುತ್ತದೆ. ತುಂಬಾ ಬಿಸಿ ವಾತಾವರಣವಿದ್ದರೆ, ರೆಫ್ರಿಜಿರೇಟರ್‌ನಲ್ಲಿ ಸಂಗ್ರಹ ಮಾಡಬಹುದು. ಇಡುವ ಮುನ್ನ ಬೀಜಗಳನ್ನು ಚೆನ್ನಾಗಿ ಒಣಗಿಸಿರಬೇಕು. ಇಲ್ಲದೇ ಹೋದರೆ ಬೀಜ ಹಾಳಾಗಿಬಿಡುತ್ತದೆ.

ಬೀಜಗಳನ್ನು ಬಹು ಕಾಲ ಸಂರಕ್ಷಿಸಿ ಇಟ್ಟರೆ, ಅದರ ರಚನೆ ಅಥವಾ ಗುಣಲಕ್ಷಣದಲ್ಲಿ ವ್ಯತ್ಯಾಸವಾಗುತ್ತದೆ. ಜಪಾನ್ ವಿಜ್ಞಾನಿ ಪ್ರೊ.ತೇರು ಹಿಗಾ ಅವರು 'ಸಂಗ್ರಹದಲ್ಲಿ ಬಹುಕಾಲದವರೆಗೆ ಇಡುವ ಬೀಜಗಳು ಮೂಲ ಸ್ವರೂಪದಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ' ಎಂದು ಹೇಳುತ್ತಾರೆ. ಅಮೆರಿಕದ ಖ್ಯಾತ ತಳಿ ವಿಜ್ಞಾನಿ ಲೂಥರ್ ಬರ್ಬ್ಯಾಂಕ್ ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

### ಮೊಳಕೆ ಸಾಮರ್ಥ್ಯ ಪರೀಕ್ಷೆ

ಕಾಲದಿಂದ ಕಾಲಕ್ಕೆ ಸಂಗ್ರಹದಲ್ಲಿನ ಬೀಜಗಳ ಗುಣಮಟ್ಟ ತಪಾಸಣೆ ಮಾಡಬೇಕಾದ್ದು ಬೀಜ ಸಂರಕ್ಷಕನ ಕರ್ತವ್ಯ. ಚೆನ್ನಾಗಿ ಮೊಳಕೆಯೊಡೆಯುವ ಸಾಮರ್ಥ್ಯ ಅವಕ್ಕಿರಬೇಕು.

- ಬೀನ್ಸ್ ಅಥವಾ ಮೆಕ್ಕೆಜೋಳದಂಥ ದೊಡ್ಡ ಬೀಜಗಳನ್ನು ನೀರಿನಲ್ಲಿ ಕೆಲವು ತಾಸುಗಳ ಕಾಲ ನೆನೆಸಿ, ಬಳಿಕ ಹಸಿ





ಬಟ್ಟೆಯಲ್ಲಿ ಸುತ್ತಿ ಇಡಬೇಕು. ಎರಡು ದಿನಗಳಲ್ಲಿ ಅವು ಮೊಳಕೆಯೊಡೆಯುತ್ತವೆ.
- ಬದನೆ, ಟೊಮ್ಯಾಟೊ ಇತರ ಬೀಜಗಳನ್ನು ಕುಂಡದಲ್ಲಿ ಬಿತ್ತಿ, ಸುತ್ತಲೂ ಬಲೆಯನ್ನು ಅಳವಡಿಸಬೇಕು. ಇದು ದನಕರುಗಳಿಗೆ ಸಿಗದಂತೆ ಮಾಡುವ ಉಪಾಯ. ನಿತ್ಯವೂ ಸ್ವಲ್ಪ ನೀರು ಹಾಕುತ್ತಿರಬೇಕು. ಒಂದು ವಾರದಲ್ಲಿ ಮೊಳಕೆ ಕಾಣಿಸಿಕೊಳ್ಳುತ್ತವೆ.
- ಮೆಣಸಿನಕಾಯಿ, ಚತುರ್ಭುಜ ಅವರೆಯಂಥ ಬೀಜಗಳು 10 ರಿಂದ 14 ದಿನಗಳಲ್ಲಿ ಮೊಳಕೆಯೊಡೆಯುತ್ತವೆ.

ನೋಡಲು ಚೆನ್ನಾಗಿರುವ, ಉತ್ತಮ ತಳಿಯ ಹಾಗೂ ಮೊಳಕೆಯೊಡೆಯುವ ಸಾಮರ್ಥ್ಯದ ಬೀಜಗಳನ್ನು ಉತ್ತಮ ಗುಣಮಟ್ಟದ್ದು ಎಂದು ಪರಿಗಣಿಸಲಾಗುತ್ತದೆ. ಇತರ ವಾಣಿಜ್ಯ ಬೆಳೆಗಳ ಬೀಜಗಳಷ್ಟೇ ಇವುಗಳಿಗೂ ಮೌಲ್ಯವಿದೆ.

(ಮೂಲ : ಬೀಜದ ನಂಟು ಪುಸ್ತಕ, ಪ್ರಕಟಣೆ : ಸಹಜ ಮೀಡಿಯಾ, 2019)



# ಶ್ರೀ ಪದ್ಧತಿ ಭತ್ತದ ಫಲಿತಾಂಶ





ಸುಸ್ಥಿರ ಕೃಷಿ ಉತ್ತೇಜನದ ದೃಷ್ಟಿಯಿಂದ ಯೋಜನೆಯಲ್ಲಿ ಶ್ರೀ ಪದ್ಧತಿ ಭತ್ತದ ಬೇಸಾಯಕ್ಕೆ ಆದ್ಯತೆ ನೀಡಲಾಗಿತ್ತು. ಕಳೆದ ಬೇಸಿಗೆಯಲ್ಲಿ ನಾಲ್ಕು ರೈತರು ಇದನ್ನು ಅಳವಡಿಸಿಕೊಂಡು ಉತ್ತಮ ಇಳುವರಿ ಪಡೆದಿರುತ್ತಾರೆ. ಅದರ ವಿವರ ಹೀಗಿದೆ.

| ರೈತರ ಹೆಸರು | ಶಾಂತಪ್ಪ | ಗಂಗಪ್ಪ ಟಿ.ಕೆ. | ನಂಜುಂಡಪ್ಪ ಕೆ.ಎಸ್. | ಕೃಷ್ಣಮೂರ್ತಿ ಚೌದರಿ |
|---|---|---|---|---|
| ಗ್ರಾಮ | ಹಳೆ ಸೀಗೆಬಾಗಿ | ದೊಡ್ಡಗೊಪ್ಪೇನಹಳ್ಳಿ | ದೊಡ್ಡಗೊಪ್ಪೇನಹಳ್ಳಿ | ಲಕ್ಷ್ಮೀಪುರ |
| ತಳಿ | ಅಮನ್ ಸೋನಾ | ಎಂ.ಎಂ.ಬಿ.ಟಿ.172 | ಎಂ.ಎಂ.ಬಿ.ಟಿ.172 | ಜ್ಯೋತಿ |
| ಪ್ರದೇಶ | 1 ಎಕರೆ | 1 ಎಕರೆ | 0.25 ಎಕರೆ | 1.5 ಎಕರೆ |
| ನಾಟಿ ದಿನಾಂಕ | 15–01–2019 | 12–02–2019 | 14–02–2019 | 13–01–2019 |
| ಕಟಾವು ದಿನಾಂಕ | 28–05–2019 | 30–05–2019 | 30–05–2019 | 02–06–2019 |
| ತೆಂಡೆಗಳ ಸಂಖ್ಯೆ | 30–40 | 25–30 | 30–35 | 30–40 |
| ಎತ್ತರ | 4 ಅಡಿ | 3 ಅಡಿ | 3 ಅಡಿ | 3 ಅಡಿ |
| ತೆನೆಯ ಉದ್ದ | 10 ಇಂಚು | 10 ಇಂಚು | 12 ಇಂಚು | 10 ಇಂಚು |
| ಪ್ರತಿ ತೆನೆಯ ಕಾಳು | 160 | 270 | 280 | 150 – 280 |
| ಕಾಳು ಇಳುವರಿ | 39 ಕ್ವಿಂಟಾಲ್(25)* | 22 ಕ್ವಿಂಟಾಲ್(19)* | 7.5 ಕ್ವಿಂಟಾಲ್(5)* | 35 ಕ್ವಿಂಟಾಲ್ (32)* |
| ಹುಲ್ಲಿನ ಇಳುವರಿ | 45 ಪೆಂಡಿ | 40 ಪೆಂಡಿ | 30 ಪೆಂಡಿ | 43 ಪೆಂಡಿ |
| ಆದಾಯ @ 750 | 65,250 | 38,500 | 13,125 | 61,250 |
| ಒಟ್ಟು ವೆಚ್ಚ (ರೂ.) | 18,360 | 23,478 | 5,860 | 14,235 |
| ಯೋಜನಾ ಉತ್ತೇಜನ (ರೂ.) | 10,000 | 10,000 | 2500 | 10,000 |

** ಆವರಣದಲ್ಲಿರುವುದು ಕಳೆದ ವರ್ಷ ಸಾಂಪ್ರದಾಯಿಕ ಪದ್ಧತಿಯಲ್ಲಿ ಅಷ್ಟೇ ಎಕರೆಯಲ್ಲಿ ಬಂದ ಇಳುವರಿ*




'ಈ ವರ್ಷ ಜಳ್ಳು ಆಗಲಿಲ್ಲ. ಮೊದಲು ನಿರಂತರವಾಗಿ ನೀರು ಬಿಡುತ್ತಿದ್ದೆವು, ಈ ವರ್ಷ ವಾರಕ್ಕೊಮ್ಮೆ ಮಾತ್ರ ಬಿಟ್ಟಿದ್ದೇವೆ.' ಎನ್ನುತ್ತಾರೆ ಕೃಷ್ಣಮೂರ್ತಿ ಚೌದರಿ. . ಈ ಸಲ ಮತ್ತೆ ಶ್ರೀ ಪದ್ಧತಿಯಲ್ಲೇ ಭತ್ತ ಹಾಕುವುದಾಗಿ ಎಲ್ಲಾ ರೈತರೂ ಒಪ್ಪಿಕೊಂಡಿದ್ದಾರೆ. ಅಲ್ಲದೆ ದೊಡ್ಡಗೊಪ್ಪೇನಹಳ್ಳಿಯ ಸರೋಜಮ್ಮ, ರಾಧಾಮಣಿ, ಮೂಡಲವಿಠಲಾಪುರದ ಉಷಾ ಹಾಗೂ ಇತರೆ ಹಲವಾರು ರೈತರು ಈ ಪದ್ಧತಿ ಅನುಸರಿಸಲು ಮುಂದೆ ಬಂದಿದ್ದಾರೆ. ನಂಜುಂಡಯ್ಯ ಅವರು ಕಳೆದ ವರ್ಷ ಕೇವಲ 0.5 ಎಕರೆಗೆ ಶ್ರೀ ಪದ್ಧತಿ ಅನುಸರಿಸಿ ಭತ್ತ ಬೆಳೆದಿದ್ದು ಈ ವರ್ಷದ ಮುಂಗಾರಿನಲ್ಲಿ 1.5 ಎಕರೆಯಲ್ಲಿ ಶ್ರೀ ಪದ್ಧತಿ ಅನುಸರಿಸುವುದಾಗಿ ಹೇಳಿದ್ದಾರೆ.

ಮಾಹಿತಿ ಕ್ರೋಢೀಕರಣ : ಚೈತ್ರ ಟಿ.ಓ. ಸ್ಮೆಕ್ ಸಂಸ್ಥೆ

## ದೂರದರ್ಶನ ಸಂದರ್ಶನ



ಬೆಂಗಳೂರು ದೂರದರ್ಶನ ಕೇಂದ್ರವು ನೀರಿನ ಸಂರಕ್ಷಣೆ, ಛಾವಣಿ ನೀರು ಸಂಗ್ರಹ ಮತ್ತು ಅಂತರ್ಜಲ ಕುಸಿತದ ಬಗ್ಗೆ ನೇರ ಸಂದರ್ಶನ ಕಾರ್ಯಕ್ರಮ ಆಯೋಜಿಸಿತ್ತು. ಸ್ಮೆಕ್ ಸಂಸ್ಥೆಯ ಮಲ್ಲಿಕಾರ್ಜುನ ಮತ್ತು ಗೊಂದಿ ಯೋಜನೆಗೆ ಭೌಗೋಳಿಕ ಮಾಹಿತಿ ವ್ಯವಸ್ಥೆ ಸೇವೆ ಒದಗಿಸುತ್ತಿರುವ ಪಿಕ್ಸಲ್ ಕಂಪನಿಯ ಡಾ. ವಿಘ್ನೇಶ್ವರ ಹೆಗಡೆಯವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಪತ್ರಕರ್ತರಾದ ಶ್ರೀ ನಂಜುಂಡಪ್ಪ ಸಂದರ್ಶನ ನಡೆಸಿಕೊಟ್ಟರು. ದಿನಾಂಕ 30.5.2019ರಂದು ಇದು ಪ್ರಸಾರವಾಯಿತು. ಕೆಳಕಂಡ ಲಿಂಕ್ ಬಳಸಿ ವೀಡಿಯೋ ವೀಕ್ಷಿಸಬಹುದು.

https://www.youtube.com/watch?v=-WlagZBNx9M&list=PLzjM9Xy4IsMTX69tkLHJtp_kF9yoKLRW5

# ಮೊಬೈಲ್ ಬಳಸಿ ಭೌಗೋಳಿಕ ಮಾಹಿತಿ ಸಂಗ್ರಹ



ಮೊಬೈಲ್ ವಿತರಣೆ

ಗೊಂದಿ ಆಧುನೀಕರಣ ಯೋಜನೆಯಲ್ಲಿ ನಿರ್ಮಿಸಿರುವ ಆಸ್ತಿಗಳು, ನೀರು ವಿತರಣೆ ಪ್ರಮಾಣದ ಅಳತೆ ಹಾಗೂ ಇನ್ನಿತರೆ ಮಾಹಿತಿಗಳನ್ನು ಸಂಗ್ರಹಿಸಲು ಪಿಕ್ಸಲ್ ಕಂಪನಿಯ ಸಹಯೋಗದಲ್ಲಿ ವಿಶೇಷ ಅಪ್ಲಿಕೇಷನ್ ತಯಾರಿಸಲಾಗಿದೆ. ಮೊಬೈಲ್ ಬಳಸಿ ಈ ಮಾಹಿತಿಯನ್ನು ಪ್ರತಿ ಅಚ್ಚುಕಟ್ಟಿನ ಸರ್ವೆ ನಂಬರಿನಲ್ಲೂ ಸಂಗ್ರಹಿಸಲಾಗುವುದು. ನೀರು ಬಳಕೆದಾರರ ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ ಈ ಜವಾಬ್ದಾರಿ ವಹಿಸಲಾಗಿದೆ. ಇದನ್ನು ಮಾಡಲು ಅನುಕೂಲವಾಗುವಂತೆ ಯೋಜನಾ ವತಿಯಿಂದ ಮೊಬೈಲ್ ಹ್ಯಾಂಡ್‌ಸೆಟ್ ನೀಡಲಾಗಿದೆ. ಮೋಟೋ ಕಂಪನಿಯ ಈ ಮೊಬೈಲ್‌ಗಳು ಈ ಕೆಲಸಕ್ಕೆ ಅನುಕೂಲವಾಗುವಂತಹ ಫೀಚರ್‌ಗಳನ್ನು ಹೊಂದಿವೆ. 26-4-2019ರಂದು 11 ನೀರು ಬಳಕೆದಾರರ ಸಹಕಾರ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಕಾರ್ಯದರ್ಶಿಗಳ ಸಮ್ಮುಖದಲ್ಲಿ ಗೊಂದಿ ಒಕ್ಕೂಟದ ಅಧ್ಯಕ್ಷರಾದ ಟಿ.ಎಸ್.ಮಂಜುನಾಥ್ ಹಾಗೂ ಸ್ಮೆಕ್ ಸಂಸ್ಥೆಯ ತಂಡದ ಉಪನಾಯಕರಾದ ಡಾ. ಶ್ರೀನಿವಾಸ ಮುದ್ರಕರ್ತ ಅವರು ಮೊಬೈಲ್ ವಿತರಿಸಿದರು. ಪಿಕ್ಸಲ್ ಸಂಸ್ಥೆಯವರು ತಮ್ಮ ಸಿಬ್ಬಂದಿ, ಸಂಘಗಳ ಕಾರ್ಯದರ್ಶಿಗಳು ಹಾಗೂ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ನೆರವಿನಿಂದ ಹೊಲಗಳವಾರು ತಾಕುಗಳ ಸರ್ವೆ ನಡೆಸುತ್ತಿದ್ದು ಅದರ ಪ್ರಗತಿ ವಿವರ ಹೀಗಿದೆ.



ಮೊಬೈಲ್ ಬಳಸಿ ಮಾಹಿತಿ ಸಂಗ್ರಹ, ಮೂಡಲವಿಠಲಾಪುರ

| ಸಂಘದ ಹೆಸರು | ಗುರಿ | ಪ್ರಗತಿ (ಜುಲೈ 10, 2019ರ ಅಂತ್ಯಕ್ಕೆ) | ಬಾಕಿ |
|---|---|---|---|
| ದೊಡ್ಡಗೊಪ್ಪೇನಹಳ್ಳಿ | 2,760 | 2,647 | 113 |
| ಸೀಗೆಬಾಗಿ | 3,809 | 3,809 | 0 |
| ಬಾರಂದೂರು | 4,950 | 4,473 | 477 |
| ಬಾಬಳ್ಳಿ | 2,219 | 2,219 | 0 |
| ತಳ್ಳಿಕಟ್ಟೆ | 3,439 | 3,078 | 361 |
| ದಾಸರಕಲ್ಲಳ್ಳಿ | 7,334 | 7,334 | 0 |
| ನಾಗತಿಬೆಳಗಲು | 5,538 | 5,244 | 294 |
| ಕಾಗೆಕೊಡಮಗ್ಗೆ | 1,728 | 1,418 | 310 |
| ಕೊಪ್ಪದೊಡ್ಡಕೆರೆ | 4,355 | 3,760 | 995 |
| ಮೂಡಲವಿಠಲಾಪುರ | 2,780 | 2,780 | 0 |
| ಶ್ರೀ ವೀರಭದ್ರೇಶ್ವರ, ಹೊಳೆಹೊನ್ನೂರು | 2,913 | 2,913 | 0 |
| ಒಟ್ಟು | 41,825 | 39,675 | 2,550 |

– ವೀರೇಶ್ ಎ.ಎಂ., ಸ್ಮೆಕ್ ಸಂಸ್ಥೆ

# ಸ್ವ-ಉದ್ಯೋಗ ತರಬೇತಿ

1-6-2019ರಂದು ಬಾಬಳ್ಳಿಯಲ್ಲಿ ಮಹಿಳಾ ಉಪ ಸಮಿತಿಯವರಿಗೆ ಸ್ವ-ಉದ್ಯೋಗ ತರಬೇತಿ ಹಮ್ಮಿಕೊಳ್ಳಲಾಗಿತ್ತು. ಶಿವಮೊಗ್ಗ ಕೃಷಿ ವಿಜ್ಞಾನ ಕೇಂದ್ರದ ಡಾ. ಜ್ಯೋತಿ ರಾಠೋಡ್ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ಮನೆಯಲ್ಲೇ ಕೈಗೊಳ್ಳಬಹುದಾದ ಸುಲಭ ಉದ್ಯೋಗಗಳು, ಸಂಪನ್ಮೂಲ ಕ್ರೋಢೀಕರಣ, ಮಾರುಕಟ್ಟೆ ಕಲ್ಪಿಸಿಕೊಳ್ಳುವ ಕೌಶಲ್ಯದ ಬಗ್ಗೆ ಅವರು ಮಾಹಿತಿ ನೀಡಿದರು. ಜೊತೆಗೆ ಸ್ಥಳೀಯವಾಗಿ ಸಿಗುವ ಕಚ್ಚಾ ವಸ್ತುಗಳನ್ನು ಬಳಸಿ ಬಾಳೆ ಚಿಪ್ಸ್, ಅಡಿಕೆತಟ್ಟೆ ಇತ್ಯಾದಿಗಳ ತಯಾರಿಕೆ ಬಗ್ಗೆ ಸಂಕ್ಷಿಪ್ತ ಮಾಹಿತಿ ಹಂಚಿಕೊಂಡರು.



## CAD Physical Progress as of 30th June 2019 (Phase 1)

| Name of the WUCS | Lining (km.) | | Achievement | Structures (nos.) | | Achievement |
|---|---|---|---|---|---|---|
| | Estimate | Achievement | % | Estimate | Achievement | % |
| 1) Doddagoppenahalli | 10.77 | 10.17 | 94.03 | 147 | 93 | 63 |
| 2) Baranduru | 27.32 | 25.57 | 94 | 376 | 338 | 90 |
| 3) Seegebagi | 11.37 | 11.12 | 98 | 169 | 120 | 71 |
| 4) Baballi | 23.44 | 23.44 | 100 | 201 | 201 | 100 |
| 5) Kagekodamagge | 11.36 | 11.36 | 100 | 114 | 114 | 100 |
| 6) Tallikatte | 11.40 | 11.30 | 99.12 | 128 | 128 | 100 |
| 7) Nagatibelagalu | 15.16 | 15.16 | 100 | 231 | 192 | 83 |
| 8) Dasarakallahalli | 18.38 | 15.95 | 86.78 | 208 | 159 | 76 |
| 9) Koppadoddakere | 16.11 | 14.58 | 91 | 188 | 102 | 54 |
| 10) Holehonnuru | 11.25 | 9.81 | 87 | 107 | 66 | 62 |
| 11) Mudalavittalapura | 9.20 | 8.00 | 87 | 71 | 24 | 34 |

## CAD Physical Progress as of 30th June 2019 (Phase 2) 82 Packages

| Name of the WUCS | Lining (km.) | | Achievement | Structures (nos.) | | Achievement |
|---|---|---|---|---|---|---|
| | Estimate | Achievement | % | Estimate | Achievement | % |
| 1) Doddagoppenahalli | 4.89 | 3.64 | 74.43 | 241 | 72 | 30 |
| 2) Baranduru | 11.43 | 11.43 | 100 | 343 | 195 | 57 |
| 3) Seegebagi | 6.22 | 6.22 | 100 | 235 | 141 | 60 |
| 4) Baballi | 16.95 | 15.88 | 93.69 | 403 | 292 | 72 |
| 5) Kagekodamagge | 9.75 | 8.98 | 92.10 | 408 | 275 | 67 |
| 6) Tallikatte | 8.35 | 7.50 | 89.82 | 320 | 138 | 43 |
| 7) Nagatibelagalu | 13.42 | 12.16 | 90.61 | 528 | 236 | 45 |
| 8) Dasarakallahalli | 12.30 | 3.25 | 26 | 376 | 24 | 6 |
| 9) Koppadoddakere | 16.35 | 11.63 | 71.13 | 511 | 48 | 9 |
| 10) Holehonnuru | 5.51 | 3.12 | 56.62 | 135 | 13 | 10 |
| 11) Mudalavittalapura | 6.27 | 4.23 | 67 | 164 | 29 | 18 |

## Main Canal and Distributary Physical Progress as of 30th June 2019

| Items of Works | Lining ( km ) | | | Structures ( nos. ) | | |
|---|---|---|---|---|---|---|
| | As per Agreement ( km ) | Achieved ( km ) | Achievement ( % ) | As per Agreement ( nos. ) | Achieved ( nos. ) | Achieved ( % ) |
| 1) Left Bank Canal | 14.74 | 14.74 | 100 | 74 | 81 | 100 |
| 2) Right Bank Canal | 74.24 | 61.42 | 82.73 | 392 | 360 | 91.83 |
| 3) Distributaries | 26.10 | 26.10 | 100 | 212 | 212 | 100 |
| **Grand Total** | **115.08** | **98.14** | **85.28** | **678** | **652** | **96.16** |

**Deepak Kumar, SMEC PSC**

## ಕಟ್ಟಡ ಕಾಮಗಾರಿಗಳ ಪ್ರಗತಿ ವಿವರ

| ಸಂಘದ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಪ್ರಗತಿ (ಜೂನ್ 30, 2019ರ ಅಂತ್ಯಕ್ಕೆ) |
|---|---|---|
| ದೊಡ್ಡಗೊಪ್ಪೇನಹಳ್ಳಿ | – | ನಿವೇಶನ ಹಸ್ತಾಂತರ ಪ್ರಕ್ರಿಯೆಯಲ್ಲಿದೆ |
| ಸೀಗೆಬಾಗಿ | – | ನಿವೇಶನ ಹಸ್ತಾಂತರ ಪ್ರಕ್ರಿಯೆಯಲ್ಲಿದೆ |
| ಬಾರಂದೂರು | 19.88 | ಮುಕ್ತಾಯ ಹಂತದಲ್ಲಿದೆ |
| ಬಾಬಳ್ಳಿ | – | ತಳಪಾಯ ಕೆಲಸ ನಡೆಯುತ್ತಿದೆ |
| ತಳ್ಳಿಕಟ್ಟೆ | 7.24 | ಮುಕ್ತಾಯಗೊಂಡಿದೆ |
| ದಾಸರಕಲ್ಲಳ್ಳಿ | 18.90 | ಮುಕ್ತಾಯ ಹಂತದಲ್ಲಿದೆ |
| ನಾಗತಿಬೆಳಗಲು | 18.80 | ಆರ್.ಸಿ.ಸಿ. ಹಾಕಲಾಗಿದೆ. |
| ಕಾಗೆಕೊಡಮಗ್ಗೆ | 13.85 | ಮುಕ್ತಾಯಗೊಂಡಿದೆ |
| ಕೊಪ್ಪದೊಡ್ಡಕೆರೆ | 18.53 | ಮುಕ್ತಾಯ ಹಂತದಲ್ಲಿದೆ |
| ಮೂಡಲವಿಠಲಾಪುರ | 18.64 | ಮುಕ್ತಾಯ ಹಂತದಲ್ಲಿದೆ |
| ಶ್ರೀ ವೀರಭದ್ರೇಶ್ವರ, ಡಣಾಯಕಪುರ | 17.65 | ಆರ್.ಸಿ.ಸಿ. ಹಾಕಲಾಗಿದೆ |
| ಗೊಂದಿ ಒಕ್ಕೂಟ, ಭದ್ರಾವತಿ | 38.82 | ಛಾವಣಿ ಅಳವಡಿಕೆ ನಡೆಯುತ್ತಿದೆ |










**ಸಂಪಾದಕೀಯ ಮಂಡಳಿ**

ಶ್ರೀ ಜಿ.ಇ. ಯತೀಶ್‌ಚಂದ್ರನ್
ಡಾ. ಶ್ರೀನಿವಾಸ ಮುದ್ರಕರ್ತ
ಶ್ರೀ ಮಲ್ಲಿಕಾರ್ಜುನ ಹೊಸಪಾಳ್ಯ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

KARNATAKA NEERAVARI NIGAM LTD.

BHADRA CADA

ADB
ASIAN DEVELOPMENT BANK

SMEC
Member of the Surbana Jurong Group

ಮುಖ್ಯ ಇಂಜಿನಿಯರ್, ಯೋಜನಾ ಅನುಷ್ಠಾನ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ
ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ – 577201

ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಮಲವಗೊಪ್ಪ, ಶಿವಮೊಗ್ಗ – 577222

ಸ್ಮೆಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
ನಂ 28, 1ನೇ ಅಡ್ಡರಸ್ತೆ ಬೀದಿ, ಗಾಂಧಿನಗರ,
ಶಿವಮೊಗ್ಗ–577201